ಕೊಡುತ್ತಾರೆ ? ಅದಕ್ಕೋಸ್ಕರ ನಾನು ನಿಯಮ ೩೩೪ಳಿಕ್ಕೆ ಪುನಃ ೩೩೪ಳಿ ಅನ್ನು ಹಾಕಿ ಪ್ರಶ್ನೆ ಕೇಳುತ್ತಿದ್ದೇನೆ. ನಾವು ಕೇಳಿರುವ ವಿಷಯಗಳಲ್ಲಿ ಬಹಳ ಗಹನವಾದ ವಿಚಾರಗಳಿವೆ.

ಉಪಾಧ್ಯಕ್ಷರು.—ತಾವು ಬಹಳ ಬುದ್ಧಿವಂತರು.

ಶ್ರೀ ಬಿ. ಸ್ವಾಮಿರಾವ್.—ನಾನು ಹಲವಾರು ವಿಚಾರಗಳ ಬಗ್ಗೆ ಕೇಳಿದ್ದೇನೆ. ಹೊಸನಗರ ತಾಲ್ಲೂಕಿನಲ್ಲಿ ಅಲ್ಲಿನ ಜನರು, ಕದ್ದು ಸಾಗಿಸುತ್ತಿದ್ದ ಬತ್ತದ ಲಾರಿಯನ್ನು ಹಿಡಿದುಕೊಟ್ಟಿದ್ದರೂ ಅದನ್ನು ಪೋಲೀಸ್‌ನವರು ಬಿಟ್ಟಿದ್ದಾರೆ, ನಾನು ಅದರ ಬಗ್ಗೆ ನಿಯಮ ೩೩೪ಳಿಕ್ಕರ ಪ್ರಸ್ತಾಪ ಮಾಡಿದ್ದೆ. ಅದರ ಬಗ್ಗೆ ಉತ್ತರ ಬರಲಿಲ್ಲ. ಲೋಕೋಪಯೋಗಿ ಇಲಾಖೆಯ ಒಬ್ಬ ಕಂಟ್ರಾಕ್ಟರ್ ದೂರಿನ ತೀರ್ಥಹಳ್ಳಿಯಲ್ಲಿ ಹಾವಂನಾಯಕರ ಸಂಬಂಧಿಕರಿಗೆ ಹೊಡೆದಿದ್ದಾರೆ. ಅದರ ಬಗ್ಗೆ ವರದಿಯನ್ನು ತರಿಸುತ್ತೇನೆಂದು ಹೇಳಿದ್ದರೂ ಅದರ ಬಗ್ಗೆ ಇದುವರೆಗೆ ಯಾವುದೇ ವರದಿ ಬರಲಿಲ್ಲ. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ನಾಟಾ ತುಂಬಿಕೊಂಡು ಹೋಗುತ್ತಿದ್ದ ಲಾರಿಯನ್ನು ಊರಿನ ಜನರು ಹಿಡಿದು ಫಾರೆಸ್ಟ್ ರೇಂಜ್ ಆಫೀಸ್‌ಗೆ ಒಪ್ಪಿಸಿದ್ದಾರೆ. ಅದರ ಬಗ್ಗೆ ನಾನು ಕೇಳಿದ್ದರೂ ಇದುವರೆಗೆ ಯಾವುದೇ ಸುದ್ದಿಯೂ ಇಲ್ಲ.

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ನಿಯಮ ೩೩೪ಳಿಕ್ಕರ ಕೆಳಗೆ ಏನಾ ಉತ್ತರ ಹೇಳುತ್ತಾರೆ ಕೇಳೋಣ.

(೨೪) ಹಿಲಕುಂಜಿಯಲ್ಲಿ ಹರಿಜನರ ಮೇಲೆ ಹಲ್ಲೆ

ಶ್ರೀ ಬಿ. ಸ್ವಾಮಿರಾವ್. ಅದೇರೀತಿ ಚಕ್ಕಾ ವರಾಹಿ ಕರ್ಮಕಾಂಡದ ಬಗ್ಗೆ ಹೇಳಿದ್ದೇನೆ. ಹಿಂದೆ ಶರಾವತಿ ಕರ್ಮಕಾಂಡದ ಬಗ್ಗೆ ಹೇಳಿದ್ದರು, ನಾನು ಚಕ್ಕಾ ವರಾಹಿ ಕರ್ಮಕಾಂಡದ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಹಿಲಕುಂಜಿಯಲ್ಲಿ ಹರಿಜನರ ಮೇಲೆ ಹಲ್ಲೆ ನಡೆದಿದೆ. ಅವರ ಮನೆಗಳನ್ನು ಸಹ ಸುಟ್ಟಿದ್ದಾರೆ ನಾನು ಅದರ ಬಗ್ಗೆ ಪ್ರಸ್ತಾಪಮಾಡಿದ್ದೆ, ಅದರ ಬಗ್ಗೆ ಯಾವುದೇ ಉತ್ತರ ಬರಲಿಲ್ಲ. ಶಿಕಾರಿಪುರದಲ್ಲಿ ಕಾಂಪೌಂಡರ್ ದಾದಿಯನ್ನು ೩೩ಮೆಎಣ್ಣೆ ಹಾಕಿ ಸುಟ್ಟಿದ್ದಾರೆ, ಸುಟ್ಟಿದ್ದರ ಬಗ್ಗೆ ತನಿಖೆ ಮಾಡಬೇಕೆಂದು ಕೇಳಿದ್ದೇನೆ. ಈ ವಿಷಯ ಪತ್ರಿಕೆಗಳಲ್ಲಿ ಬಂದಿದೆ ಹತ್ತಪ್ರತಿಗಳನ್ನು ಸಹ ಹಂಚಿದ್ದಾರೆ. ಇಷ್ಟೆಲ್ಲಾ ಪ್ರಚಾರವಾಗಿದ್ದರೂ ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ನಾವು ಕೇಳಿದ್ದಕ್ಕೆ ಅವರು ಉತ್ತರ ಕೊಡದಿದ್ದರೆ ನಾವು ಏತಕ್ಕೆ ಪ್ರಸ್ತಾಪ ಮಾಡಬೇಕು ? ನಾವು ವಿಷಯವನ್ನು ಪ್ರಸ್ತಾಪ ಮಾಡುವುದು, ಅವರು ಕಣ್ಣು ಮುಚ್ಚಿಕೊಂಡು ಪ್ಯಂಗ್ಯವಾಗಿ ಉತ್ತರ ಕೊಡುವುದು. ಅವರು ಕೊಡುವ ಉತ್ತರದಿಂದ ನಮಗೆ ಅಸಮಾಧಾನವಾಗುತ್ತದೆ. ಅವರು ವಿಚಾರ ಮಾಡೋಣ ಎಂದು ಹೇಳುವುದು ಆಲ್ಲಿ ಜನ ಸಾಯೋದು, ಮತ್ತು ನಾವು ಈ ಕಡೆ ಊರಿಗೆ ಹೋಗೋದು. ಪ್ರತಿದಿವಸ ಹೀಗೆ ಆದರೆ ನಾವು ಇಲ್ಲಿ ಬಂದು ಕಂಠ ಶೋಷಣೆ ಮಾಡಿದ್ದಕ್ಕೆ ಪರಿಹಾರವೇನು ? ನಾನು ನಿಯಮ ೩೩೪ಳಿಕ್ಕರ ಪ್ರಕಾರ ಏನೇನು ಕೇಳಿದ್ದೇನೆ ಅದರ ಬಗ್ಗೆ ಸಮಗ್ರ ತನಿಖೆ ಮಾಡಲು ಸಿ.ಒ.ಡಿ. ತನಿಖೆಗೆ ಒಪ್ಪಿಸಬೇಕೆಂದು ಈ ದಿವಸ ನಾನು ಒತ್ತಾಯ ಮಾಡುತ್ತಿದ್ದೇನೆ. ಇದು ನಗೆಯಾಡುವ ವಿಚಾರವಲ್ಲ. ಸಿದ್ಧರಾಮೇಶ್ ಅವರ ಕೊಲೆಯ ಬಗ್ಗೆ ಸರ್ಕಾರ ಹೊಣೆಯಾಗಿದೆಯೆಂದು ಹೇಳಿದ್ದೇನೆ. ಇದರಲ್ಲಿ ಪೋಲೀಸ್‌ನವರು ಸೇರಿದ್ದಾರೆಂದು ನಾನು ಹೇಳಿದ್ದೆ. ಅದು ಈಗ ರುಜುವಾತು ಆಗಿದೆ. ನಾವು ಪ್ರಸ್ತಾಪ ಮಾಡಿರುವ ವಿಚಾರಗಳ ಬಗ್ಗೆ ಉತ್ತರ ಕೊಡದೇ ಇರುವುದರಿಂದ ಇದಕ್ಕೆ ಸರ್ಕಾರ ಹೊಣೆಯಾಗಿದೆ. ಆದುದರಿಂದ ಇದನ್ನೆಲ್ಲಾ ಸಿ.ಒ.ಡಿ. ತನಿಖೆಗೆ ಒಪ್ಪಿಸಿ ನಮಗೆ ಉತ್ತರ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಸನ್ಮಾನ್ಯ ಉಪಾಧ್ಯಕ್ಷರೆ, ಅವರು ಕೊಟ್ಟಿರತಕ್ಕ ಸೂಚನಾಪತ್ರಗಳಿಗೆ ನಿಯಮ ೩೩೪ಳಿಕ್ಕರ ಪ್ರಕಾರ ನಾನು ಉತ್ತರ ತರಿಸುತ್ತೇನೆ. ಮಾನ್ಯ ಸದಸ್ಯರು ಕೆಲವೊಂದು ವಿಚಾರಗಳ ಬಗ್ಗೆ ವಿಶ್ಲೇಷಣೆ ಮಾಡಿದ್ದಾರೆ. ನಿಯಮ ೩೩೪ಳಿಕ್ಕರ ಪ್ರಕಾರ ಅದನ್ನು ಹಾಕುತ್ತೇನೆಂದು ಹೇಳಿದ್ದೇನೆ. ಒಂದಕ್ಕೊಂದು ಸರಿಯೋಯಿತು. ನಾನು ಸರ್ಕಾರದ ಪರವಾಗಿ ಹಲವಾರು ವಿಷಯಗಳ ಬಗ್ಗೆ ಉತ್ತರ ಕೊಟ್ಟಿದ್ದೇನೆ ಅವರು ಕೇಳಿದ ಪ್ರಶ್ನೆಗಳಿಗೆ ಎಷ್ಟಕ್ಕೆ ಉತ್ತರ ಕೊಟ್ಟಿದ್ದೇನೆ ಎನ್ನುವ ನೆನಪು ೩ಲ್ಲ. ನಿಯಮ ೩೩೪ಳಿಕ್ಕರ ವ್ಯಾಪ್ತಿಯನ್ನು ಸಭೆಯಲ್ಲಿ ತಾವು ಮತ್ತು ಅಧ್ಯಕ್ಷರು ಹಲವಾರು ಸಲ ಪುನರುಚ್ಚರ ಮಾಡಿದ್ದಿರಿ. ಸಭೆಯಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ ನಂತರ ಆಡಳಿತ ಯಂತ್ರ ಕೆಲಸಮಾಡತಕ್ಕ ದೃಷ್ಟಿಯಲ್ಲಿ ಉತ್ತರ

ನೇರವಾಗಿ ಸಿಕ್ಕುವುದಿಲ್ಲ. ಒಂದೊಂದು ಸಲ ಉತ್ತರವನ್ನು ತಕ್ಷಣ ತರಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆ ಕೆಲವು ಸಮಯದಲ್ಲಿ ಉತ್ತರ ತರಿಸಿ ಕೊಡುವುದಕ್ಕೆ ಸಮಯ ಹಿಡಿಯುತ್ತದೆ. ಎರಡು ವಾರಗಳು ಆದರೂ ಕೂಡ ಉತ್ತರ ಸಿಗದಿರತಕ್ಕ ಸನ್ನಿವೇಶಗಳಿವೆ. ಕೆಲವು ಸಮಯದಲ್ಲಿ ನಿಯಮ ೩೩ಳಿರ ಪ್ರಶ್ನೆಗೆ ನಾನೇ ಉತ್ತರ ಕೊಟ್ಟಿದ್ದೇನೆ. ಕೆಲವು ವಿಷಯಗಳಲ್ಲಿ ಉತ್ತರ ಬಾರದೆ ಇರಬಹುದು. ನಿಯಮ ೩೩ಳಿರ ವ್ಯಾಪ್ತಿಯಲ್ಲಿ ವ್ಯಾಪಕವಾಗಿ ಕೆಲಸಮಾಡುವುದಕ್ಕೆ ನಾನು ಪ್ರಯತ್ನ ಮಾಡಿದ್ದೇನೆಂದು ನಾನು ಅಂದುಕೊಂಡಿದ್ದೇನೆ ಮಾನ್ಯ ಸದಸ್ಯರುಗಳಿಗೆ ನಾನು ಕೊಡತಕ್ಕ ಉತ್ತರದಿಂದ ಸಮಾಧಾನವಾಗಿಲ್ಲ ವೆನ್ನುವುದು ನನಗೆ ಗೊತ್ತಿದೆ. ಮಾನ್ಯ ಸದಸ್ಯರು ಮಾತನಾಡುವಾಗ ಕಂಡ ತೊಂದರೆಗಳನ್ನು ಮಾಡಿದ್ದೇವೆಂದು ಹೇಳಿದ್ದಾರೆ. ನಮ್ಮ ಶಕ್ತಿಯಿಂದ ಉತ್ತರ ತರಿಸುವುದಕೆ ನಾನು ಪ್ರಯತ್ನ ಮಾಡಿದ್ದೇನೆ. ಮಾನ್ಯ ಸದಸ್ಯರ ಹತ್ತಿರ ಇರತಕ್ಕ ಪಟ್ಟಿಯನ್ನು ನನ್ನ ಕಡೆಗೆ ಕೊಡಲಿ. ಉತ್ತರ ಬಾರದೆ ಇರುವ ವಿಷಯಗಳಿಗೆ ಉತ್ತರ ತರಿಸುವುದಕ್ಕೆ ಅಂತಿಮ ಪ್ರಯತ್ನ ಮಾಡುತ್ತೇನೆಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಿಯಮ ೩೩ಳಿರಲ್ಲಿ ಒಂದು ತೊಂದರೆಯಿದೆ.

ಮಾನ್ಯ ಅಧ್ಯಕ್ಷರೇ, ಗಮನ ಸೆಳೆಯುವ ಸೂಚನೆ, ಅಲ್ಪ ಕಾಲಾವಧಿ ಪ್ರಶ್ನೆ ಮತ್ತು ಪ್ರಶ್ನೆಗಳು ಹೊಸ ನಿಯಮಾವಳಿಗಳ ಪ್ರಕಾರ ಎಂಟು ಹತ್ತು ದಿವಸಗಳಲ್ಲಿ ಪ್ರಶ್ನೆಗೆ ಉತ್ತರ ಸಿಗುತ್ತದೆ. ಪ್ರಶ್ನೆಗೆ ನಿಖರವಾದ ಉತ್ತರವನ್ನು ತರಿಸಿಕೊಡುವುದಕ್ಕೆ ಅವಕಾಶ ಇದೆ. ಒಂದೆರಡು ದಿನ–ಮೂರು ದಿನ ಹೆಚ್ಚು ಕಡಿಮೆ ಆಗಬಹುದು. ಹಿಂದಿನ ನಡವಳಿಕೆಗಳ ಪ್ರಕಾರ ಹಿಂದಿನ ಅಧಿವೇಶನದಲ್ಲಿ ೧೯೭೮ ರಿಂದ ೧೯೮೩ ರವರೆಗೆ ಐದು ವರ್ಷ ಪ್ರಶ್ನೆ ಕೇಳಿದರೆ ಉತ್ತರವೇ ಇರಲಿಲ್ಲ. ಈಗ ಒಂದು ವಾರ–ಹತ್ತು ದಿವಸಗಳ ಒಳಗೆ ಉತ್ತರವಾದರೂ ಸಿಗುತ್ತದೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದಕ್ಕೇ ಈಗ ಹೀಗೆ ಮಾಡುತ್ತಿದ್ದೀರಾ ?

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಪ್ರಾಮಾಣಿಕವಾದ ಪ್ರಯತ್ನವನ್ನಂತೂ ಮಾಡಿದ್ದೇನೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರಿಸ ಬೇಕಾದ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಯಾವುದಕ್ಕೆ ಉತ್ತರ ತರಿಸಿಕೊಡುತ್ತೇವೆ. ಯಾವುದು ಸಾಧ್ಯ ಯಾವುದು ಅಸಾಧ್ಯವೆಂದು ನಿಯಮ ೩೩ಳಿರ ವ್ಯಾಪ್ತಿ ಮತ್ತು ಅವರ ಸಾಧ್ಯ–ಅಸಾಧ್ಯತೆಗಳ ಬಗ್ಗೆ ಚಿಂತನೆಯನ್ನು ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೇ, ತಪ್ಪುಗೂ ಕೂಡ ಗೊತ್ತಿದೆ. ಇಷ್ಟು ದಿವಸ ನಾವು ಸುಮ್ಮನೆ ಇದ್ದೆವು. ಮಾನ್ಯ ಸದಸ್ಯರಾದ ಸ್ವಾಮಿರಾವ್ ಮತ್ತು ಬೇರೆ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದರು. ನಾನು ಒಪ್ಪುತ್ತೇನೆ ಏನೆಂದರೆ ದೊಡ್ಡದಾದ ಕ್ಲಿಷ್ಟವಾದ ಪ್ರಶ್ನೆಗೆ ಉತ್ತರ ತರಿಸಲಿಕ್ಕೆ ಅಸಾಧ್ಯವಾದರೆ ಹೆಚ್ಚಿನ ವಿವರಗಳನ್ನು ತರಿಸಲು ದಾಖಲೆಗಳನ್ನು ಹುಡುಕಿಸಬೇಕು. ಇದಕ್ಕಾಗಿ ಸರ್ಕಾರಕ್ಕೆ ತೊಂದರೆ ಬರುತ್ತದೆ ಎಂಬ ಮಾತನ್ನು ನಾನು ಒಪ್ಪುತ್ತೇನೆ. ಆದರೆ, ಮಾನ್ಯ ಸದಸ್ಯರು ಕೇಳಿರತಕ್ಕಂಥ ವಿಷಯ ಚಿಕ್ಕಮಗಳೂರಿನಲ್ಲಿ ಒಂದುಪತ್ರಿಕೆ ಮೇಲೆ ಹಲ್ಲೆಯ ಸಂಬಂಧವಾಗಿರತಕ್ಕಂಥದ್ದು ಆಗಿದೆ ಇದಕ್ಕೆ ಯಾವ ದಾಖಲೆಯನ್ನು ಹುಡಕಿಸಬೇಕು ? ಒಂದು ಅಕ್ಕಿ ಲಾರಿಯನ್ನು ಹಿಡಿದರು, ಗುಂಡು ಹಾರಿಸಿದರು, ಬಿಡಿಸಿಕೊಂಡು ಹೋದರು ಎಂದು ಈ ವಿಚಾರಕ್ಕೆ ಯಾವ ದಾಖಲೆಯನ್ನು ಹುಡುಕಿಸಬೇಕು ? ಎನ್ನುವುದು ಒಂದು ಪ್ರಶ್ನೆ. ಅದೇರೀತಿ ಹರಿಜನರ ಮೇಲೆ ಹಲ್ಲೆ ಮಾಡಿರತಕ್ಕಂಥ ಪ್ರಶ್ನೆ ಇದಕ್ಕೆ ಯಾವ ದಾಖಲೆಯನ್ನು ಹುಡುಕಿಸಬೇಕು ? ಇದಕ್ಕೆ ಎಷ್ಟು ಕಾಲಬೇಕು ? ಇದು ಮಾನ್ಯ ಸದಸ್ಯರ ಸಹನೆ ಪರೀಕ್ಷೆ ಮಾಡುತ್ತಿದ್ದಾರೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ, ಎರಡು ಮೂರು ದಿವಸಗಳಲ್ಲಿ ಸ್ಟೇಟ್‌ಮೆಂಟ್ ಮಾಡುತ್ತೇನೆ ಎಂದು ಈ ಸಭೆಯಲ್ಲಿ ಮಾನ್ಯ ಮಂತ್ರಿಗಳು ಭರವಸೆಯನ್ನು ಕೊಟ್ಟಮೇಲೆ...

ಶ್ರೀ ಎ. ಲಕ್ಷ್ಮೀಸಾಗರ್.—ಕೆಲವುದರಲ್ಲಿ ಮಾಡಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಕೆಲವುದರಲ್ಲಿ ಏಕೆ ಮಾಡಲಿಲ್ಲ ಎಂಬುದೇ ನಮ್ಮ ಪ್ರಶ್ನೆ. ನಿಮ್ಮ ಹತ್ತಿರ ವೈರ್‌ಲೆಸ್ ಸೆಟ್ ಇದೆ, ಪೋಲೀಸ್ ಇಲಾಖೆ ಇದೆ. ಇಷ್ಟೆಲ್ಲಾ ಸಾಧ್ಯತೆ ಇದ್ದಾಗಲೂ ಕೂಡ

ಏಕೆ ಮಾಡಲಿಲ್ಲ ? ಈ ಸಗಣಿ ಸಾರಿಸತಕ್ಕಂಥ ಕೆಲಸವನ್ನು ದಯವಿಟ್ಟು ಬಿಡಬೇಕು. ಒಂದು ಸಾರಿ ಮಾತು ಕೊಟ್ಟಮೇಲೆ ಆದರ ಪ್ರಕಾರ ನಿಮ್ಮಿಂದ ಹೇಳಿಕೆಯನ್ನು ತೆಗೆದುಕೊಳ್ಳತಕ್ಕಂಥ ಹಕ್ಕು ಈ ಸದನಕ್ಕೆ ಇದೆ...it becomes property of the House and the Member has every right to demand the Government to give answer to the question raised in the House The Government is bound to answer. Why you have not answered ? ಹದಿನೈದು-ಇಪ್ಪತ್ತು ದಿವಸ ಆದಮೇಲೂ ಕೂಡ ಆದೇ ಆಡ ಗೊಲಜ್ಜಿ ಕತೆಯನ್ನೇ ಹೇಳುತ್ತಿದ್ದರೆ ನೀವೇನು ಸರ್ಕಾರ ನಡೆಸುತ್ತಿದ್ದೀರಾ ? Alright, we will look into the matter, ಎಂದು ಹೇಳಿದ್ದೀರಿ.

ಶ್ರೀ ಎ. ಲಕ್ಷ್ಮೀಸಾಗರ್.—ಅದನ್ನು ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ದಯವಿಟ್ಟು ನಾನು ಹೇಳುವುದನ್ನು ಕೇಳಿ. ಕೆಲವು ವಿಚಾರಗಳಲ್ಲಿ ತಾವು ಹೇಳಿದ್ದೀರಿ. ಆದರೆ 'Still we are looking into the matter' ಎಂದರೆ ಏನರ್ಥ ? ಕೆಲವು ವಿಚಾರಗಳಲ್ಲಿ ''ಪರಿಶೀಲನೆ ಮಾಡುತ್ತೇನೆ'' ಎಂದು ಹೇಳಿದ್ದೀರಿ. ಆಯಿತು ಪರಿಶೀಲನೆ ಮಾಡಿ. ಆದರೆ ಕೆಲವು ವಿಚಾರಗಳಲ್ಲಿ ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದ ಮೇಲೆ ಕೂಡ ಹೇಳಿಕೆಯನ್ನು ಇದುವರೆಗೂ ಕೊಟ್ಟಿಲ್ಲ ಎಂದರೆ ನಮಗೇನು ಆಡಗೂಲಜ್ಜಿ ಕತೆಯನ್ನು ಹೇಳುತ್ತೀರಾ ? ಇದು ಸಾಧ್ಯವಿಲ್ಲ. ಯಾವ ರೀತಿಯಲ್ಲಿ ನೀವು ಸರ್ಕಾರ ನಡೆಸುತ್ತಿದ್ದೀರಿ ? ಏಕೆ ಈ ಮಂತ್ರಿಗಳು ಎಲ್ಲಾ ? You are weak to get all these information on the table of the House, ಇದನ್ನೆಲ್ಲಾ ಬಿಟ್ಟು ಹಳೇ ಆಡಗೂಲಜ್ಜಿ ಕತೆ ಹೇಳಿದ ಹಾಗೆ ಹೇಳುತ್ತಾ ಹೋದರೆ ಹೇಗೆ ? ನಾನು ಅಪ್ಪು ಹೊತ್ತಿನಿಂದಲೂ ಕೇಳುತ್ತಾನೇ ಇದ್ದೆ. I think about ten days back this issue was raised. ಸ್ಟೇಟ್‌ಮೆಂಟ್ ಮಾಡುತ್ತೇನೆ ಎಂದು ಈ ಸದನದಲ್ಲಿ ಆಶ್ವಾಸನೆ ಕೊಟ್ಟಮೇಲೆ ಅದನ್ನು ಮಾಡತಕ್ಕಂಥ ಜವಾಬ್ದಾರಿ ನಿಮ್ಮ ಮೇಲೆ ಬರುತ್ತದೆ. ಈಗ ತಾವು ನಮ್ಮ ರಕ್ಷಣೆಗೆ ಬರಬೇಕು. ತಾವು ನಮ್ಮ ರಕ್ಷಣೆಗೆ ಬರದೇ ಹೋದರೆ ಇದನ್ನು ನಾವು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. The Chair will have to come to the aid of the hon' Member. ಹೇಳಿಕೆ ಕೊಡುತ್ತೇನೆ ಎಂದು ಹೇಳಿದ ಮೇಲೆ ಅವರಂ ಹೇಳಿಕೆಯನ್ನು ಕೊಡಲೇಬೇಕಾಗುತ್ತದೆ. ನಿಮಗೆ ಬಹಳ ಕಷ್ಟವಾಗಿದೆ ಎಂದು ಕೇಳುವುದಕ್ಕೋಸ್ಕರ ನಾವು ಇಲ್ಲಿ ಬಂದಿಲ್ಲ. ನೀವು ಮಾತು ಕೊಟ್ಟು ಇಪ್ಪತ್ತು ದಿವಸ, ಒಂದು ತಿಂಗಳು ಆಗಿದೆ. ಕಾಯುವುದಕ್ಕೂ ಕೂಡ ಒಂದು ಮಿತಿ ಇದೆ. ನಮ್ಮ ಸಹನೆಗೂ ಒಂದು ಮಿತಿ ಇದೆ. Since, to-day is the last day of the session the Government should furnish the answer it-day itself...

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ್ದೇನೆ. ಕೆಲವು ವಿಷಯಗಳಲ್ಲಿ ' ವಿಚಾರ ಮಾಡುತ್ತೇನೆ. ಪರದಿ ತರಿಸಿ ಹೇಳಿಕೆ ಕೊಡುತ್ತೇನೆ'' ಎಂದು ಹೇಳಿದ್ದು ನಿಜ ಅದನ್ನು ಅವರು ಒಪ್ಪಿಕೊಂಡಿದ್ದಾರೆ. ಕೆಲವು ವರದಿ ಇನ್ನೂ ಬಂದಿಲ್ಲ ಎಂಬುದೂ ಕೂಡ ಅಷ್ಟೇ ನಿಜ. ಅದನ್ನು ತರಿಸಿಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಯಾವಾಗ ತರಿಸಿಕೊಡುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್ —ಸಭೆ ಇಲ್ಲದೇ ಹೋದರೆ ಮುಂದೆ ತರಿಸಿಕೊಡುವುದಕ್ಕೆ ಆಗುವುದಿಲ್ಲವೇ?

ಶ್ರೀ ಎಸ್. ಬಂಗಾರಪ್ಪ —ಆದರೆ ನೀವು ಮಾಡಿರುವ ತಪ್ಪಿಗೆ ಈಗಲೇ ಉತ್ತರಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ತಪ್ಪು ಮಾಡಿಲ್ಲ.

ಶ್ರೀ ಎಸ್. ಬಂಗಾರಪ್ಪ —ರೆಕಾರ್ಡ್ ತರಿಸಿ ನೋಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರಿಗೆ ನಾನು ಹೇಳುವುದೇನೆಂದರೆ, ನನ್ನ ತಿಳುವಳಿಕೆ ಪ್ರಕಾರ ನಾನು ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇನೆ.

ಶ್ರೀ ಎಸ್. ಬಂಗಾರಪ್ಪ —ತಮ್ಮ ಉತ್ತರವನ್ನು ಕೇಳಿದ ಮೇಲೆಯೇ ನಾನು ಹೇಳುತ್ತಿರುವುದು ರೆಕಾರ್ಡ್ಸ್ ತರಿಸಿ ನೋಡಿ. ಎರಡು ಮೂರು ದಿವಸಗಳಲ್ಲಿ ಹೇಳಿಕೆ ಕೊಡುತ್ತೇನೆ ಎಂದು ಹೇಳಿದಮೇಲೆ ಈಗ ಸಾಧ್ಯವಾಗುವುದಿಲ್ಲವೆಂದು ಹೇಳುವುದಾದರೆ ಇದಕ್ಕೆ ಕಾರಣ ಏನು ? ಇವತ್ತು ಇದರ ಬಗ್ಗೆಯೇ ಚರ್ಚೆ ಮಾಡೋಣ. ಅಮೇಲೆ ಬೇರೆ ಬಿಸಿನೆಸ್ ತೆಗೆದುಕೊಳ್ಳೋಣ.

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಆದಷ್ಟು ಬೇಗ ಉತ್ತರ ತರಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಅವರು ಈವತ್ತೇ ಹೇಳಬೇಕು. ಈ ರೀತಿಯ ಧಾಟಿಯ ಉತ್ತರ ಕೇಳಲಿಕ್ಕೆ ನಾವು ಇಲ್ಲಿ ಬಂದಿಲ್ಲ. ದಯವಿಟ್ಟು ಮಾನ್ಯ ಅಧ್ಯಕ್ಷರು ಗಮನ ಕೊಡಬೇಕು. ಎರಡು ಮೂರು ದಿವಸಗಳಲ್ಲಿ ಹೇಳಿಕೆ ಕೊಡುತ್ತೇನೆ ಎಂದು ಅವರು ಹೇಳಿರುವಾಗ, It is an assurance given to this August House. ಅದನ್ನು ಬಿಟ್ಟು ಪುನಃ ಇದನ್ನು ಪರಿಶೀಲನೆ ಮಾಡುತ್ತೇನೆ ಎಂದು ಏತಕ್ಕೆ ಹೇಳಬೇಕು ? We are not prepared to accept this kind of reply from the Minister.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ತಾವು ಹೇಳಿದ್ದು ತಪ್ಪು ಎಂದು ಕ್ಷಮೆಯಾದರೂ ಕೇಳಲಿ.

ಶ್ರೀ ಎ, ಲಕ್ಷ್ಮೀಸಾಗರ್.— ಆಹಾ" ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ತಾವು ಹೇಳಿದ್ದು ಯಾವುದೂ ರೆಕಾರ್ಡ್‌ನಲ್ಲಿ ಇಲ್ಲವೆಂದು ಅವರು ಹೇಳಿದ್ದಾರೆ.

ಶ್ರೀ ಹೆಚ್. ಗಂಗಾಧರಪ್ಪ.—ಅವರು 'ಆಹಾ' ಎಂದು ಹೇಳಿದ್ದಾರೆ. ಅದನ್ನು ವರದಿಗಾರರು ಬರೆದುಕೊಳ್ಳುವ ಹಾಗೆಯೇ ಇಲ್ಲ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ರೆಕಾರ್ಡ್‌ನಲ್ಲಿ ಬರುವುದಿಲ್ಲವೆಂದು ಹೇಳತಕ್ಕ ಹಕ್ಕು ಅವರಿಗೆ ಇಲ್ಲ. ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಏನನ್ನೋ ಪ್ರಸ್ತಾಪ ಮಾಡಿದಾಗ ಇದು ರೆಕಾರ್ಡ್‌ನಲ್ಲಿ ಬರುವುದಿಲ್ಲವೆಂದು ಹೇಳತಕ್ಕ ಹಕ್ಕು ಅವರಿಗೆ ಏನು ಇದೆ.

MR. DY. SPEAKER.—That is only a conversation between the hon. Members.

ಶ್ರೀ ಎ. ಲಕ್ಷ್ಮೀಸಾಗರ್.—ಈ ಸದನದಲ್ಲಿ ಮಾತನಾಡುವಾಗ ತಮ್ಮ ಅನುಮತಿಯನ್ನು ಕೇಳಿ ಅದು ನಿಯಮಗಳ ಒಳಗೆ ಇದ್ದರೆ ಮಾತ್ರ ರೆಕಾರ್ಡ್‌ನಲ್ಲಿ ಬರುತ್ತದೆ. ಅದನ್ನು ಬಿಟ್ಟು ಮಾತನಾಡಿದರೆ ಅದು ರೆಕಾರ್ಡ್‌ನಲ್ಲಿ ಬರುವುದಿಲ್ಲ.

ಉಪಾಧ್ಯಕ್ಷರು.—ನನ್ನ ಮೂಲಕ ಮಾತನಾಡಿ. That is only a conversation between the hon'ble members.

SRI M. MALLIKARJUNA KARGE.—Sir, through you, I request the Hon'ble Minister to make a statement or else apologise, at least. ಈಗಲಾದರೂ ಅವರು ಹೇಳಬೇಕಲ್ಲವೇ ? ಈಗಲೂ ತಮ್ಮ ಮುಖಾಂತರ ನಾನು ಕೇಳುತ್ತಿದ್ದೇನೆ.

(ಗೊಂದಲ)

ಉಪಾಧ್ಯಕ್ಷರು, —ಈ ಪ್ರಕರಣವನ್ನು ಇಲ್ಲಿಗೆ ಮುಗಿಸೋಣ. ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಜಿ.ಎಸ್. ಬಸವರಾಜ್.—ನಾನು ಒಂದು ವರ್ಷದಿಂದ ನೋಡುತ್ತಿದ್ದೇನೆ. ಒಂದು ಸಲವೂ ನನ್ನ ಪ್ರಶ್ನೆಗಳು ಸದನದಲ್ಲಿ ಉತ್ತರಿಸುವ ಪಟ್ಟಿಯಲ್ಲಿ ಬರುವುದಿಲ್ಲ. ಅವು ಬ್ಯಾಲೆಟ್‌ನಲ್ಲಿ ಬಿದ್ದಿರುತ್ತವೆ. ಇನ್ನು ನಿಯಮ ೩೩ಳಿರ ಕೆಳಗಡೆ ಕೇಳುವ ಪ್ರಶ್ನೆಗಳಿಗೂ ಸದನದಲ್ಲಿ ಸರಿಯಾದ ಉತ್ತರ ಸಿಗುವುದಿಲ್ಲ. ಈ ಮೂಲಕ ಏನು ಕೇಳಿದರೂ ಒಪ್ಪುವುದಕ್ಕಾಗುವುದಿಲ್ಲ ; ಪರಿಶೀಲಿಸುತ್ತೇವೆ ಎಂದು ಹೇಳುತ್ತಾರೆ. ಗಮನ ಸೆಳೆಯುವ ಸೂಚನೆಗಳು ಸಹ ಬ್ಯಾಲೆಟ್‌ನಲ್ಲಿ ಇರುವುದಿಲ್ಲ. ನಿಯಮ ೩೩ಳಿರ ಕೆಳಗಡೆ ಸದನದಲ್ಲಿ ಒಂದು ವೇಳೆಯನ್ನು ಗೊತ್ತುಪಡಿಸಿ. ಆದಕ್ಕೆ ಸರಿಯಾದ ಉತ್ತರ ಬರುವ ವ್ಯವಸ್ಥೆ ಮಾಡಬೇಕು.

ಉಪಾಧ್ಯಕ್ಷರು.—ನಿಯಮ ೩೩ಳಿರ ಕೆಳಗೆ ಯಾವ ಸದಸ್ಯರುಗಳು ಯಾವ ಪ್ರಸ್ತಾಪವನ್ನು ಎತ್ತಿದರೂ ಸಹ ಅವರಿಗೆ ಸರಿಯಾದ ಉತ್ತರ ಬರುತ್ತಿಲ್ಲ ಎಂಬುದನ್ನು ನಾನು ಸರ್ಕಾರಕ್ಕೆ ತಿಳಿಯಪಡಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ನಿಯಮ ೩೫ರ ವ್ಯಾಪ್ತಿಯ ವಿಸ್ತಾರವನ್ನು ತಾವು ಗಮನಿಸಬೇಕೆಂದು ತಮ್ಮಲ್ಲಿ ವಿನಯದಿಂದ ಮನವಿ ಮಾಡಿಕೊಳ್ಳುತ್ತೇನೆ. ಈ ವಿಷಯದ ಜೊತೆಗೆ ಸದನದ ಕಾರ್ಯ ಕಲಾಪಗಳ ಸಮಿತಿಯಲ್ಲೂ ಸ್ವಲ್ಪಮಟ್ಟಿಗೆ ತೀರ್ಮಾನವಾಗಿದೆ. ಆದರೂ ಪೂರ್ತಿ ತೀರ್ಮಾನ ಆಗಿಲ್ಲ. ಇನ್ನೊಂದು ಸಾರಿ ಆ ಬಗ್ಗೆ ತೀರ್ಮಾನಕ್ಕೆ ಬರುವ್ಹದಿದೆ. ನಿಯಮ ೩೫ರ ಪ್ರಕಾರ ವ್ಯಾಪ್ತಿ ಏನು ಎಂಬುದನ್ನು ಸದನ ಕಾರ್ಯಕಲಾಪಗಳ ಸಲಹಾ ಸಮಿತಿ ಹಾಗೂ ಈ ಸಭೆ ತೀರ್ಮಾನ ಮಾಡಿದ ನಂತರ ಆ ಬಗ್ಗೆ ಹೊಣೆಗಾರಿಕೆ ಯಾರದು ಎಂಬುದನ್ನು ಹೇಳಬೇಕಾದುದು ಉಚಿತವೆಂದು ನಾನು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಪತಿಗಳೇ, ನಿಯಮ ೩೫ರ ವ್ಯಾಪ್ತಿಯ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಈ ಬಗ್ಗೆ ಕಾರ್ಯಕಲಾಪಗಳ ಸಮಿತಿಯಲ್ಲೂ ಸಾಕಷ್ಟು ಚರ್ಚೆಯಾಗಿದೆ. ಈಗ ನಮ್ಮ ಮುಂದೆ ಬಂದಿರತಕ್ಕಂಥ ವಿಚಾರದ ಬಗ್ಗೆ ಪ್ರಶ್ನೆ ಮಾಡೋಣ. ಹಾಗೂ ಮುಂದೆ ಬರತಕ್ಕ ವಿಷಯಗಳು ಏನಿವೆ ಅವುಗಳ ಬಗ್ಗೆ ವಿಚಾರ ಮಾಡೋಣ. ಆದರೆ ನೀವು ಕೊಟ್ಟಿರತಕ್ಕ ಮಾತು ಏನಿದೆ, ಅದನ್ನು ನೋಡಬೇಕಾಗುತ್ತದೆ. ನಿಯಮ ೩೫ರ ವ್ಯಾಪ್ತಿಯ ಬಗ್ಗೆ ಮುಂದೆ ಬರತಕ್ಕ ವಿಚಾರಗಳನ್ನು ನಾವು ವಿಚಾರ ಮಾಡೋಣ. ಅದನ್ನು ಬಿಡ ಎಂದು ಹೇಳುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಇದನ್ನು ಬಿಟ್ಟು ಆದಕ್ಕೆ ಹೋಗುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖೂರ್ಗೆ.—ಮಾನ್ಯ ಮಂತ್ರಿಗಳು ಕೊಟ್ಟಂಥ ಮಾತನ್ನು ನಡೆಸಿಕೊಡಬೇಕಾಗುತ್ತದೆ.

ಶ್ರೀ ಎ.ಲಕ್ಷ್ಮೀಸಾಗರ್.—ಈ ವ್ಯಾಪ್ತಿಯನ್ನು ಇನ್ನೂ ಡಿಫೈನ್ ಮಾಡುವುದಕ್ಕಾಗುವುದಿಲ್ಲ. ಈ ಬಗ್ಗೆ ವಿಷಯವನ್ನು ತರಿಸಿಕೊಡುತ್ತೇನೆಂದು ಈಗಲೂ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಮಾತುಕೊಟ್ಟ ಹಾಗೆ ನಡೆದುಕೊಳ್ಳಬೇಕಾಗುತ್ತದೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ನಿಯಮ ೩೫ರ ಕೆಳಗೆ ಸರ್ಕಾರದಿಂದ ಆಶ್ವಾಸನೆ ಸಿಕ್ಕಿದೆ. ಹಾಗೂ ಇವೊತ್ತು ಸದನದ ಕೊನೆಯ ದಿವಸ ಇದೆ. ಇವೊತ್ತಿನವರೆಗೂ ಈ ಬಗ್ಗೆ ಸರ್ಕಾರದಿಂದ ಉತ್ತರ ಬಂದಿಲ್ಲ ಸರ್ಕಾರಕ್ಕೆ ಉತ್ತರ ಕೊಡುವುದಕ್ಕೆ ಏಕೆ ಆಗುವುದಿಲ್ಲ ಎಂಬುದು ಪ್ರಶ್ನೆ ಇದೆ. ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತೇವೆ ಎಂದು ಹೇಳಿದ್ದರಿಂದ ನಾವು ಪ್ರಶ್ನೆ ಮಾಡುತ್ತಿದ್ದೇವೆ. ಸರ್ಕಾರದಿಂದ ಉತ್ತರ ಬರಲಿಲ್ಲ ಎಂದರೆ ಇದು ಸಂಶಯಕ್ಕೆ ಕಾರಣವಾಗುತ್ತದೆ.

ಉಪಾಧ್ಯಕ್ಷರು —ಒಂದು ವಿಷಯದ ಮೇಲೆ ಉತ್ತರವನ್ನು ತರಿಸಿಕೊಡುತ್ತೇನೆ ಅಂದ ಮೇಲೆ ಅದನ್ನು ಜಾಗ್ರತೆ ತರಿಸಿಕೊಡಬೇಕಾಗುತ್ತದೆ. ಆ ಬಗ್ಗೆ ಸರ್ಕಾರ ಪ್ರಯತ್ನ ಮಾಡುತ್ತಿದೆ.

ಶ್ರೀ ಎಸ್. ಬಂಗಾರಪ್ಪ.—ತಾವು ಅಧ್ಯಕ್ಷರಾಗಿ ಇದನ್ನು ಒಪ್ಪಿದ್ದೀರಿ ಎಂದು ನಾನು ಭಾವಿಸುವುದಿಲ್ಲ. Because it is an assurance given to this August House. Today is the last day. ತಾವುವ್ಯಾಖ್ಯಾನವನ್ನು ಒಪ್ಪಿದ್ದೀರಿ ಎನ್ನುವ ಭಾವನೆಗೆ ಬಂದಿಲ್ಲ. ೨-೩ ದಿವಸಗಳಲ್ಲಿ ಉತ್ತರವನ್ನು ತರಿಸಿಕೊಡುತ್ತೇನೆಂದು ಹೇಳಿದ ಮೇಲೆ ಆದಕ್ಕೆ ಸರ್ಕಾರ ಜವಾಬ್ದಾರಿಯಾಗುತ್ತದೆ. ನಾವು ನಿಯಮ ೩೫ರ ನಿಯಮದ ವ್ಯಾಪ್ತಿಯನ್ನು ವಿಶ್ಲೇಷಣೆ ಮಾಡತಕ್ಕ ಕಾಲ ಯಾವುದು ? ಇದನ್ನು ನೀವು ಮೊದಲೇ ಯೋಚನೆ ಮಾಡಬೇಕಾಗಿತ್ತು. ಶಾಸನಸಭೆ ಇನ್ನೂ ಒಂದು ವಾರ ಇದ್ದಾಗಲೇ ಇದನ್ನು ತರಿಸಿಕೊಡ ತ್ತೇವೆಂದು ಹೇಳಿದ್ದರು. ಹಾಗೂ ಈ ಬಗ್ಗೆ ೮-೧೦ ದಿವಸಗಳಿಂದ ಸದಸ್ಯರು ಪ್ರಸ್ತಾಪ ಮಾಡುತ್ತಲೇ ಬಂದಿದ್ದಾರೆ. ಆದರೂ ಇಷ್ಟು ವಿಧಾನ ಮಾಡುವುದಕ್ಕೆ ಕಾರಣ ಏನು ? ಸರ್ಕಾರ ನಡೆಸುತ್ತಿರುವ ನೀವು ಇದಕ್ಕೆ ಹೊಣೆಗಾರರಾಗಬೇಕಾಗುತ್ತದೆ. ಸರ್ಕಾರದ ಸೂತ್ರವನ್ನು ಹಿಡಿದಿರತಕ್ಕ ನೀವು ಈ ರೀತಿಯಾದರೆ, ನೀವು ಈ ಕಡೆ ಕೂತುಕೊಳ್ಳಬೇಕಾಗುತ್ತದೆ. ಎಲ್ಲಾ ವ್ಯವಸ್ಥೆಯನ್ನು ಹೊಂದಿರತಕ್ಕಂಥ ಸರ್ಕಾರ ಈ ರೀತಿ ವಿಫಲವಾದರೆ ನಾವು ಏನು ಮಾಡಬೇಕಾಗುತ್ತದೆ? ನಾವು ಈ ಬಗ್ಗೆ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ಈ ಸಮಯದಲ್ಲಿ ನಾವು ಈ ಸದನದ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಬಿಡಬೇಕೇ ಅಥವಾ ಬೇಡವೇ ಎನ್ನುವ ಬಗ್ಗೆ ವಿಚಾರ ಮಾಡ

ಬೇಕಾಗುತ್ತದೆ. ಆ ತೀರ್ಮಾನಕ್ಕೆ ನಾವು ಇನ್ನೂ ಬಂದಿಲ್ಲ. ನಿಯಮ ೩೩ರ ಬಗ್ಗೆ ಚರ್ಚೆ ಮಾಡಲು ತಕ್ಕ ಕಾಲ ಇದು ಅಲ್ಲ. ಮಾನ್ಯ ಮಂತ್ರಿಗಳು ಸದನದಲ್ಲಿ ಹೇಳಿಕೆ ಕೊಟ್ಟಮೇಲೆ ಅವರಂತೆ ಅವರು ನಡೆದುಕೊಳ್ಳಬೇಕಾಗುತ್ತದೆ. ಹೇಳಿಕೆ ಕೊಟ್ಟಿದ್ದು ನಿಜ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. To that extent I appreciate your stand. This is the only way out. ಈ ದಿನ ಸಂಜೆ ೫ ಗಂಟೆಯ ಒಳಗೆ ಅವರು ಉತ್ತರ ಕೊಡದಿದ್ದರೆ, ಅವರು ಉತ್ತರ ಕೊಡಲು ಸಾಧ್ಯವಾಗದಿದ್ದರೆ ನಮ್ಮ ಹಕ್ಕಿನ ಗತಿ ಏನಾಗುತ್ತದೆ ? ಈ ಬಗ್ಗೆ ನಮಗೆ ಉತ್ತರ ಬರದಿದ್ದರೆ ಅಧ್ಯಕ್ಷರು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ. ನಮಗೆ ಸಂಪೂರ್ಣ ರಕ್ಷಣೆ ಕೊಡತಕ್ಕ ಜವಾಬ್ದಾರಿ ನಿಮ್ಮದು ಇದೆ. ನೀವು ಯಾವ ರೀತಿ ರಕ್ಷಣೆ ಕೊಡುತ್ತೀರೋ ಆ ರೀತಿ ರಕ್ಷಣೆ ಕೊಡಿ. ಒಂದು ವೇಳೆ ಅವರು ಸಂಜೆಯ ವೇಳೆ–ಯೊಳಗೆ ಉತ್ತರ ಕೊಡುವುದಕ್ಕೆ ಸಾಧ್ಯವಾಗದಿದ್ದರೆ ಇದು ಸದನಕ್ಕೆ ಆದ ಅವಮಾನ ಎಂದು ತಿಳಿದು, ಅಧ್ಯಕ್ಷರು ಸರ್ಕಾರಕ್ಕೆ ಛೀಮಾರಿ ಹಾಕಬೇಕಾಗುತ್ತದೆ. ಇದಿಲ್ಲದೆ ಬೇರೆ ದಾರಿ ಇನ್ನೇನಿದೆ. ಅಧ್ಯಕ್ಷರು ಸರ್ಕಾರಕ್ಕೆ ಛೀಮಾರಿ ಹಾಕಬೇಕು. ಇದು ನನ್ನ ಸಲಹೆ. ದಯಮಾಡಿ ತಾವು ನಮ್ಮ ರಕ್ಷಣೆಗೆ ಬಂದು ಸರ್ಕಾರಕ್ಕೆ ಛೀಮಾರಿ ಹಾಕಬೇಕು. ನಂತರ ನಾವು ಬೇರೆ ಕಾರ್ಯಕಲಾಪಗಳನ್ನು ನಡೆಸಬೇಕೋ ಬಿಡಬೇಕೋ ಎಂದು ನಾವು ಚರ್ಚೆ ಮಾಡೋಣ.

ಶ್ರೀ ಎಂ.ಎಸ್ ಕೃಷ್ಣನ್. ಒಂದು ಮಾತನ್ನು ನಾನು ಹೇಳಬಯಸುತ್ತೇನೆ ಮಾನ್ಯ ಲಟ್ಚ್ಮೀಸಾಗರ್ ರವರು ಹೇಳಿದ ಹಾಗೆ ನಿಯಮ ೩೩ರ ವ್ಯಾಪ್ತಿಯ ಬಗ್ಗೆ ಚರ್ಚೆ ಆಗಬೇಕಾಗಿದೆ ಇದರ ಬಗ್ಗೆ ಸ್ವಲ್ಪ ಗೊಂದಲ ನನ್ನ ಮನಸ್ಸಿನಲ್ಲಿಯೂ ಇದೆ.

ಉಪಾಧ್ಯಕ್ಷರು.—ಸದಸ್ಯರ ಅನುಕೂಲಕ್ಕೋಸ್ಕರವೇ ಈ ನಿಯಮವನ್ನು ತಂದಿದ್ದೇವೆ.

ಶ್ರೀ ಎಂ ಎಸ್. ಕೃಷ್ಣನ್ – ಈ ಬಗ್ಗೆ ನಾನು ನಿಮ್ಮನ್ನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಆ ಬಗ್ಗೆ ಪುನಃ ಚರ್ಚೆ ಮಾಡಬೇಕಾಗಿದೆ. ಮಂತ್ರಿಗಳು ಯಾರೇ ಆಗಿರಲಿ ಅವರು ಆ ರೀತಿ ಭರವಸೆ ಕೊಟ್ಟಮೇಲೆ ಆ ಬಗ್ಗೆ ಹೇಳಿಕೆ ಕೊಡುತ್ತೇವೆ ಎಂದು ಹೇಳಿದ ಮೇಲೆ ಆ ಭರವಸೆಯನ್ನು ಈಡೇರಿಸುವ ಜವಾಬ್ದಾರಿ ಅವರದ್ದಾಗಿರುತ್ತದೆ ; ಸರ್ಕಾರದ್ದಾಗಿರುತ್ತದೆ ಅದನ್ನು ಈಡೇರಿಸುವುದಕ್ಕಾಗದಿದ್ದರೆ ಅದಕ್ಕೆ ಕಾರಣ ಏನು ಎಂಬುದನ್ನು ಹೇಳಬೇಕಾಗುತ್ತದೆ. ಈ ಕಾರಣದಿಂದ ಆಗಲಿಲ್ಲ, ಆದ್ದರಿಂದ ತಪ್ಪಾಯಿತು, ಕ್ಷಮಿಸಿ ಈ ಬಗ್ಗೆ ಮುಂದಿನ ಸಾರಿ ಹೇಳಿಕೆ ಕೊಡುತ್ತೇನೆ ಎಂದಾದರೂ ಹೇಳಬೇಕಾಗುತ್ತದೆ. ಇದೇ ಏನೂ ಮರ್ಯಾದೆಯ ಪ್ರಶ್ನೆಯಲ್ಲ. ನನಗೆ ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ಹಿಂದೆ ಲೋಕಸಭೆಯಲ್ಲೂ ಕೂಡಾ ಇಂತಹ ಒಂದು ಪ್ರಶ್ನೆ ಬಂದಿತ್ತು. ಆಗ ಪ್ರಧಾನಿಗಳಾಗಿದ್ದ ಜವಹರಲಾಲ್ ನೆಹರೂ ಅವರು ಲೋಕಸಭೆಯಲ್ಲಿ ಒಂದು ಭರವಸೆಯನ್ನು ಕೊಟ್ಟಿದ್ದರು. ಆ ದಿನ ಅವರು ಭರವಸೆಯನ್ನು ಈಡೇರಿಸುವುದಕ್ಕಾಗಲಿಲ್ಲ. ಆಗ ಅವರು ಸಭೆಯಲ್ಲಿ ನಿಂತು ನನ್ನನ್ನು ಕ್ಷಮಿಸಬೇಕು ಈ ಬಗ್ಗೆ ನಾನು ಉತ್ತರವನ್ನು ಕೊಡಲು ಸಾಧ್ಯವಾಗಲಿಲ್ಲ, ಮುಂದಿನ ಸಾರಿ ಈ ಬಗ್ಗೆ ಉತ್ತರ ಕೊಡುತ್ತೇನೆ ಎಂದು ಹೇಳಿದರು. ಆ ರೀತಿಯ ಹೇಳಿಕೆಯನ್ನಾದರೂ ಇಲ್ಲಿ ಇವರು ಕೊಡಬೇಕಾಗುತ್ತದೆ.

ಮಾನ್ಯ ಉಪಾಧ್ಯಕ್ಷರೇ. ಬಂಗಾರಪ್ಪನವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನು ಯೋಚನೆ ಮಾಡಿ ತಾವು ತೀರ್ಮಾನ ಮಾಡಬೇಕು.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ.....

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಅಧ್ಯಕ್ಷರೇ.....

ಉಪಾಧ್ಯಕ್ಷರು.—ಶಿವಮೂರ್ತಿಗಳೇ, ಇದರ ಬಗ್ಗೆ ವ್ಯಾಖ್ಯಾನ ಆಗಿಹೋಗಿದೆ.

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಉಪಾಧ್ಯಕ್ಷರೇ, ಸತ್ಯಮಿರಾವ್ ಅವರು ಕಳಂಹಿಸಿರುವುದಕ್ಕೆ ನಾನೂ ಕೂಡಾ ಸೈನ್ ಹಾಕಿದ್ದೇನೆ. ಇದು ಬಹಳ ಗಂಭೀರವಾಗಿರತಕ್ಕ ವಿಚಾರ. ಇದರಲ್ಲಿ ಸಚಿವರೊಬ್ಬರ ಕೈವಾಡ ಇದೆ ಎಂದು ತಿಳಿದು ಬಂದಿದೆ. ವಿದೇಶಿ ಮುದ್ರೆ ಇರತಕ್ಕಂಥ ಬಾಟಲ್‌ಗಳನ್ನು ಹಿಡಿದುಕೊಂಡಿದ್ದಾರೆ. ಲಕ್ಷಾಂತರ ರೂಪಾಯಿಗಳನ್ನು ಪೋಲೀಸರು ವಶಪಡಿಸಿಕೊಂಡಿದ್ದಾರೆ. ಅದನ್ನು ಪೋಲೀಸ್ ಇಲಾಖೆ ವಾಹನದಲ್ಲೇ ವಾಪಸ್ ತೆಗೆದುಕೊಂಡು ಬಂದಿರತಕ್ಕಂಥವರಲ್ಲಿ ಕ್ಯಾಬಿನೆಟ್ ಸಚಿವರೊಬ್ಬರು ಇನ್‌ವಾಲ್ವ್ ಆಗಿದ್ದಾರೆ. ಜನತಾ ಪಕ್ಷದ ನಾಯಕರೂ ಸಹ ಇದರಲ್ಲಿ

ಇನ್‌ವಾಲ್ವ್ ಆಗಿದ್ದಾರೆ. ಇದು ಬಹಳ ಗಂಭೀರವಾಗಿರತಕ್ಕ ಪ್ರಕರಣ, ಇದರ ಬಗ್ಗೆ ನಾವು ಸದನದಲ್ಲಿ ಪ್ರಸ್ತಾಪ ಮಾಡಿದಾಗ, ಮಾನ್ಯ ಸಚಿವರಾದ ಲಕ್ಷ್ಮೀಸಾಗರ್‌ರವರು, ಸದನಕ್ಕೆ ಇದರ ಬಗ್ಗೆ ಒಂದು ಸ್ಟೇಟ್‌ಮೆಂಟ್ ಕೊಡುತ್ತೇನೆಂಬ ಮಾತನ್ನು ಹೇಳಿದ್ದಾರೆ. ಇವತ್ತು ನಾವು ಈ ಸದನದ ಸದಸ್ಯರಾಗಿ ಬಂದು, ಗಂಭೀರವಾಗಿರತಕ್ಕ, ಹಾಗೂ ಸಾರ್ವಜನಿಕ ಮಹತ್ವ ಇರತಕ್ಕ ವಿಚಾರ ಪ್ರಸ್ತಾಪ ಮಾಡಿ, ಸರಕಾರದ ಉತ್ತರ ತೆಗೆದುಕೊಳ್ಳಲಿಲ್ಲ. ಎಂದರೆ, ನಾವು ಏತಕ್ಕೆ ಇಲ್ಲಿಗೆ ಬರಬೇಕು, ನಮ್ಮ ಹಕ್ಕಿಗೆ, ಹಾಗೂ ಸಾರ್ವಜನಿಕರ ಹಕ್ಕಿಗೆ ರಕ್ಷಣೆ ಕೊಡತಕ್ಕದ್ದು ತಮ್ಮ ಮೇಲಿದೆ. ಆ ಜವಾಬ್ದಾರಿಯಿಂದ ತಾವು ನಮ್ಮ ಹಕ್ಕಿಗೆ ರಕ್ಷಣೆಕೊಡಬೇಕು. ಮಾನ್ಯ ಸಚಿವರು ಭರವಸೆಯನ್ನು ಕೊಟ್ಟು ಆ ಭರವಸೆಯನ್ನು ಪೂರೈಸತಕ್ಕದ್ದು ಇದೆ. ಈ ವಿಚಾರವನ್ನು ತಮ್ಮ ಅವಗಾಹನೆಗೆ ತಂದಿದ್ದೇವೆ. ಈ ಗಂಭೀರವಾಗಿರತಕ್ಕ ವಿಚಾರಕ್ಕೆ ಒತ್ತು ಕೊಡತಕ್ಕದು ನಮ್ಮ ಉದ್ದೇಶ. ಆದಕ್ಕಾಗಿ ಇದನ್ನು ನಿಯಮ ೩೫ಳ ಕೆಳಗೆ ಪುನ: ತಂದಿದ್ದೇವೆ. ಇವರ್ ಬಗ್ಗೆ ತಾವು ಸರಿಯಾದ ತೀರ್ಮಾನ ಕೊಡಬೇಕು, ಸರ್ಕಾರ ನಿರ್ಲಕ್ಷ್ಯ ರೀತಿಯಿಂದ ಹೋದರೆ ನಮ್ಮ ಹಕ್ಕನ್ನು ಕಾಪಾಡುವುದಕ್ಕೆ ಆಗುವುದಿಲ್ಲ. ಈ ಹಕ್ಕು ಚ್ಯುತಿ ಬಗ್ಗೆ ತಾವು ತೀರ್ಮಾನ ಕೊಡಬೇಕೆಂದು ನಾನು ಹೇಳುತ್ತೇನೆ,

ಉಪಾಧ್ಯಕ್ಷರು.—ಈ ೩೫ಳನೇ ನಿಯಮವನ್ನು ಯಾವ ರೀತಿ ಭಾವಿಸಬೇಕೆಂದು ನನಗೆ ಅರ್ಥವಾಗಿದೆ. ಮಂತ್ರಿಗಳು ಮೊದಲು ಉತ್ತರ ಹೇಳಲಿ.

ಶ್ರೀ ಜೆ. ಹೆಚ್. ಪಟೇಲ್.— ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಚಿವರೇ ಹೇಳಿದಹಾಗೆ ಕೆಲವೊಂದು ಪ್ರಶ್ನೆಗಳಿಗೆ ಉತ್ತರ ಸಾಧ್ಯ ಇರುತ್ತದೆ, ಅವುಗಳಿಗೆ ತಕ್ಷಣ ಉತ್ತರ ಕೊಡಬಹುದು. ನಮ್ಮ ಗಮನಕ್ಕೆ ಬಂದ ವಿಷಯಗಳ ಬಗ್ಗೆ ತಕ್ಷಣ ಉತ್ತರ ಕೊಡಬಹುದು. ಇನ್ನು ಕೆಲವು ವಿಷಯಗಳು ನಮ್ಮ ಗಮನಕ್ಕೆ ಬರದೆ ಸಂಬಂಧಪಟ್ಟ ಸದಸ್ಯರುಗಳಿಗೆ ಮಾಹಿತಿ ಬಂದು ಅವರು ಹಾಕಿದಂಥ ಪ್ರಶ್ನೆಗಳಿಗೆ ನಾವು ಇಲಾಖೆಯ ಮೂಲಕ ಉತ್ತರ ತರಿಸಿ ಕೊಡಬಹುದು. ಈಗ ಏಕಾಏಕಿ ವಿಚಾರದಲ್ಲಿ ಬೆಂಕಿ ಬಿದ್ದಿದೆ. ಅದಕ್ಕೆ ಏನು ಮಾಡುತ್ತಿದ್ದೀರಿ, ಅಲ್ಲಿ ಏನಾಗಿದೆ ಎಂದು ಕೇಳಿದರೆ ಹೇಗೆ ? ಮಾನ್ಯ ಸದಸ್ಯರುಗಳು ೩೫ಳನೇ ನಿಯಮದ ಕೆಳಗೆ ಕೆಲವು ಸಮಸ್ಯೆಗಳನ್ನು ಸದನದ ಗಮನಕ್ಕೆ ಹಾಗೂ ಸರ್ಕಾರದ ಗಮನಕ್ಕೆ ತರಬಹುದು. ಆದರೆ ಅದಕ್ಕೆ ಸರ್ಕಾರ ಉತ್ತರ ಕೊಡಲೇ ಬೇಕೆಂದು ಏನೂ ಇಲ್ಲ.

ಶ್ರೀ ಕೆ. ಶಿವಮೂರ್ತಿ.—ಉತ್ತರ ಕೊಡುತ್ತೇವೆಂದು ಭರವಸೆ ಕೊಟ್ಟಿದ್ದರು.

ಉಪಾಧ್ಯಕ್ಷರು.—ಮಾನ್ಯ ಸಚಿವರು ತಮ್ಮ ಮಾತನ್ನು ಪೂರ್ಣಮಾಡಲಿ.

ಶ್ರೀ ಜೆ. ಹೆಚ್. ಪಟೇಲ್.—ಕೆಲವು ವಿಷಯಗಳನ್ನು ಸದನದ ಗಮನಕ್ಕೆ ತರುವ ಎಂದು ಅಧಿಕಾರವನ್ನು ೩೫ಳನೇ ನಿಯಮದಲ್ಲಿ ಮಾನ್ಯ ಸದಸ್ಯರಿಗೆ ನೀಡಲಾಗಿದೆ ಎಂದು ಭಾವಿಸುತ್ತೇನೆ. ಯಾವುದಕ್ಕೆ ಸಾಧ್ಯವೋ ಅದಕ್ಕೆ ಆಗಲೇ ಉತ್ತರ ಒದಗಿಸುತ್ತೇವೆ. ಕೆಲವೊಂದು ಪ್ರಶ್ನೆಗಳಿಗೆ ಉತ್ತರ ಕೊಡುತ್ತೇವೆಂದು ಹೇಳಿರುತ್ತೇವೆ. ಕಾರಣಾಂತರದಿಂದ ಅದಕ್ಕೆ ಉತ್ತರ ಬಂದಿಲ್ಲದೇ ಇರಬಹುದು. ಇದರಲ್ಲಿ ಎರಡು ಅಂಶಗಳು ಇರುತ್ತವೆ. ಒಂದು ವಿಷಯವನ್ನು ಸದನದ ಗಮನಕ್ಕೆ ತರುವುದು, ಎರಡನೆಯದು ಅದಕ್ಕೆ ಉತ್ತರ ಕೊಡುತ್ತೇವೆಂದು ಹೇಳಿರತಕ್ಕದ್ದು. ಹಾಗೂ ಹೇಳಿದ್ದನ್ನು ನಡೆಸುವುದು. ಎರಡನೆಯ ಅಂಶದ ಬಗ್ಗೆ ಯಾವ ಪ್ರಶ್ನೆಗೆ ಯಾವ ಕಾರಣದಿಂದ ಉತ್ತರ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಬಹುದು. ಈ ರೀತಿ ಹೇಳುವುದಕ್ಕೆ ಸರಕಾರಕ್ಕೆ ಅಭ್ಯಂತರ ಏನೂ ಇಲ್ಲ. ಇದರಲ್ಲಿ ಮುಚ್ಚಿಡುವುದು ಏನೂ ಇಲ್ಲ. ಈ ಕಾರಣದಿಂದ ಈ ಪ್ರಶ್ನೆಗೆ ಉತ್ತರ ಬಂದಿಲ್ಲ, ಉತ್ತರ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಬಹುದು. ಇವತ್ತು ಏಕಾಏಕಿ ಪ್ರಶ್ನೆ ಕೇಳಿ ಇವತ್ತೇ, ಸಾಯಂಕಾಲದೊಳಗೇ, ಉತ್ತರ ಒದಗಿಸಿಕೊಡಬೇಕೆಂದು ಹೇಳಿದರೆ ಹೇಗೆ ?

ಶ್ರೀ ಎಸ್. ಬಂಗಾರಪ್ಪ.—ಆ ರೀತಿ ಯಾರು ಕೇಳಿದ್ದಾರೆ ?

ಶ್ರೀ ಜೆ. ಹೆಚ್. ಪಟೇಲ್.—ಹಿಂದೆ ಕೇಳಿದ್ದ ಪ್ರಶ್ನೆಯಾದರೆ ಅದಕ್ಕೆ ಇಪ್ಪತ್ತು ದಿನಗಳ ಒಳಗಾಗಿ ಉತ್ತರ ಕೊಡುವುದಕ್ಕೆ ಏತಕ್ಕೆ ಆಗಿಲ್ಲ ಎಂಬುದನ್ನು ಹೇಳಿಯೇ ಹೇಳುತ್ತಾರೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಅದನ್ನೇ ನಾವೂ ಕೇಳಿದ್ದು.

ಶ್ರೀ ಜೆ. ಹೆಚ್. ಪಟೇಲ್.—ಕಾನೂನು ಪ್ರಕಾರ, ನಿಯಮಾವಳಿಗಳ ಪ್ರಕಾರ ಏನು ಅಷ್ಯೂರೆನ್ಸ್ ಕೊಟ್ಟಿರುತ್ತೇವೆಯೋ ಆ ಅಷ್ಯೂರೆನ್ಸ್ ಯಾವುದನ್ನು ಫುಲ್‌ಫಿಲ್ ಮಾಡುವುದಕ್ಕೆ ಆಗುವು

ದಿಲ್ಲವೋ ಆಗ ಅದು ಅಷ್ಯೂರೆನ್ಸ್ ಕಮಿಟಿಗೆ ಹೋಗುತ್ತದೆ. ಮಾನ್ಯ ಕೃಷ್ಣನ್ ಅವರು ಹೇಳಿದ ಉದಾಹರಣೆಗಳನ್ನು ನಾನೂ ಹೇಳಬೇಕೆಂದು ಇದ್ದೆ. ಪ್ರಧಾನಮಂತ್ರಿಗಳಾಗಿರಲಿ ಉತ್ತರ ಕೊಡಬೇಕು, ಇಲ್ಲ ಏತಕ್ಕೆ ಕೊಡುವುದಕ್ಕೆ ಆಗಿಲ್ಲ ಎಂಬುದನ್ನು ಹೇಳಬೇಕು. ಈಗಲೇ ಕೊಟ್ಟೇಬಿಡಬೇಕು. ಈಗಲೇ ಕೇಳಿದ ಪ್ರಶ್ನೆಗೆ ಈಗಲೇ ಉತ್ತರ ಕೊಡಬೇಕೆಂದು ಕೇಳುತ್ತಿದ್ದೀರಿ ಎಂದು ನಾನಂ ತಿಳಿದುಕೊಂಡಿದ್ದೆ. ತಾವು ಹಿಂದೆಯೇ ಕೇಳಿದ್ದರೆ. ಅದನ್ನು ರೆಫರ್ ಮಾಡಿ, ಇಲಾಖೆಯಿಂದ ಏನು ಬಂದಿದೆ ಎಂದು ತಿಳಿದು ಕೊಂಡು ಬರದೇ ಇದ್ದರೆ ಉತ್ತರ ತರಿಸಿಕೊಂಡು, ಹೇಳುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಚಿವರು ಹೇಳಿರುವುದು ಸರಿ. ಈಗ ತೊಂದರೆ ಬಂದಿರುವುದು ಏನೆಂದರೆ, ಮಾನ್ಯ ಸಚಿವರು ವಿತಕ್ಕೋಸ್ಯರ ಉತ್ತರ ತರಿಸಿ ಕೊಡುವುದಕ್ಕೆ ಆಗಲಿಲ್ಲ ಎಂದು, ಈಗ ಇವರಂ ಮತ್ತೊಂದು ಭರವಸೆಯನ್ನು ಕೊಡುತ್ತಿರುವ ಹಾಗೆ ಇದೆ. ಇವತ್ತು ಸಾಯಂಕಾಲ ಐದು ಗಂಟೆಯೊಳಗೆ ಉತ್ತರ ತರಿಸಿಕೊಡುವುದಕ್ಕೆ ಸಾಧ್ಯ ಇದೆಯೇ ? ಯಾವ ಯಾವ ಪ್ರಶ್ನೆಗಳಿಗೆ ಮಾನ್ಯ ಸಚಿವರುಗಳು ಲಕ್ಷ್ಮೀಸಾಗರ್‌ರವರೇ ಆಗಲಿ, ಯಾರೇ ಆಗಿರಲಿ, ನಾಳೆ ನಾಡಿದ್ದರೊಳಗೆ ಉತ್ತರ ಕೊಡುತ್ತೇವೆಂದು ಹೇಳಿ ಕೊಡದೇ ಇದ್ದರೆ, ಕಡೆಯ ದಿವಸವಾದರೂ ಉತ್ತರ ಕೊಡಬೇಕಲ್ಲ. ಇವತ್ತು ಸಂಜೆಯೊಳಗೆ ಉತ್ತರ ಕೊಡುವ ಸಾಧ್ಯತೆಗಳು ಇದೆಯೇ ಇಲ್ಲವೇ ಎಂಬುದನ್ನು ಹೇಳಬೇಕಾಂ. ಉತ್ತರ ಕೊಡುವುದಕ್ಕೆ ಆಗದೇ ಹೋದರೆ ಇದನ್ನು ಪ್ರತಿಷ್ಠೆಯ ಮೇಲೆ ಇಟ್ಟುಕೊಳ್ಳಬೇಕಾಗಿಲ್ಲ. ಬಂಗಾರಪ್ಪನವರಿಗೂ ಏನು ಪ್ರತಿಷ್ಠೆ ಮಾಡಬೇಕೆಂಬ ಅಭಿಪ್ರಾಯ ಇಲ್ಲ. ನಮಗೂ ಸಹ ಇಲ್ಲ. ಹಿಂದೆ ಒಂದು ಸಲ ಪ್ರಧಾನಮಂತ್ರಿಯಾಗಿದ್ದ ಜವಹರಲಾಲ್ ನೆಹರೂ ಅವರೇ ಈ ರೀತಿ ಹೇಳಿದ್ದರು. ಆ ರೀತಿಯಾಗಿ ಉತ್ತರ ತರಿಸಂವುದಕ್ಕೆ ಆಗಲಿಲ್ಲ. ಕ್ಷಮಿಸಿರಿ ಎಂದಂ ಹೇಳಿಬಿಟ್ಟಿದ್ದರೆ ಈ ಪ್ರಶ್ನೆನೇ ಮುಗಿದು ಹೋಗಿಬಿಡುತ್ತಿತ್ತು. ಈ ಪ್ರಶ್ನೆನೇ ಬರುತ್ತಿರಲಿಲ್ಲ. ಇದನ್ನು ತಮಗೇ ಬಿಟ್ಟಿದ್ದೇವೆ, ಏನು ಬೇಕಾದರೂ ಮಾಡಬಹುದು.

ಶ್ರೀ ಪಿ. ರಾಮದೇವ್.—ಮಾನ್ಯ ಬಂಗಾರಪ್ಪನವರಾಗಲೀ, ಮಾನ್ಯ ಕೃಷ್ಣನ್ ಅವರಾಗಲೀ, ಈ ಸದನಕ್ಕೆ ಹೊಸಬರಲ್ಲ. ಮಾನ್ಯ ಶಿವಮೂರ್ತಿಯವರು ಮಾತ್ರ ಹೊಸಬರು. ಕಳೆದ ಹಲವಾರು ವರ್ಷಗಳಿಂದ ನಾವು ಕೆಲವು ವಿಷಯಗಳನ್ನು ಕಾಲಿಂಗ್ ಅಟೆನ್‌ಷನ್ ಮೂಲಕವಾಗಲೀ, ೩೧೦ನೇ ನಿಯಮದ ಪ್ರಕಾರವಾಗಲೀ, ಸದನದ ಗಮನಕ್ಕೆ ತರುತ್ತಿದ್ದೇವೆ. ಈ ಎಲ್ಲಾ ವಿಚಾರಗಳು ಬಹಳ ಗಂಭೀರವಾದ ವಿಚಾರಗಳೇ. ಇವುಗಳಿಗೆ ಉತ್ತರ ಕೊಡಲು ಸರಕಾರ ಸಮಯ ತೆಗೆದುಕೊಳ್ಳುತ್ತದೆ. ಕೆಲವು ಸಲ ಉತ್ತರವನ್ನು ಸದನ ಮುಗಿದ ಮೇಲೆ, ಅವರವರ ಮನೆಗಳಿಗೇ ಕಳುಹಿಸತಕ್ಕ ಪದ್ಧತಿ ಇತ್ತು. ಯಾವುದನ್ನು ನಾವು ರೈಸ್ ಮಾಡಿ. ಸರಕಾರದವರು ಅದಕ್ಕೆ ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ, ಅದನ್ನು ಮನೆಗೆ ಕಳುಹಿಸಿಕೊಡುತ್ತಿದ್ದರು. ನನಗೆ ಇಂತಹವು ನೂರಾರು ಬಂದಿವೆ. ತಾವು ಇವತ್ತು ಹೊಸ ವಿಚಾರ ಹೇಳುತ್ತಿದ್ದೀರಿ, ಇದರಿಂದ ನಮಗೆ ಆಶ್ಚರ್ಯವಾಗುತ್ತಿದೆ. ಹಿಂದೆ ಉತ್ತರ ವನ್ನು ಮನೆಗೆ ಕಳುಹಿಸತಕ್ಕ ಪದ್ಧತಿ ಏನಿತ್ತೋ ಅದನ್ನು ಅನುಸರಿಸಿದರೆ ಇಬ್ಬರಿಗೂ ಅನುಕೂಲವಾಗುತ್ತದೆ. ಈ ಸಮಸ್ಯೆಯು ಪರಿಹಾರವಾಗುತ್ತದೆ. ೩೧೨ನೇ ನಿಯಮದಲ್ಲೂ ಇದೇ ಮಾಡುತ್ತಿದ್ದರು ಆದುದರಿಂದ ಅಪಾಲಜಿ ಕೇಳತಕ್ಕಂಥ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಎತ್ತಿರತಕ್ಕ ವಿಚಾರಗಳಿಗೆ ಉತ್ತರ ಮನೆಗೆ ಕಳುಹಿಸುವುದಾದರೆ, ಮಾನ್ಯ ರಾಮದೇವರಂಥ ಸದಸ್ಯರು ಉತ್ತರವನ್ನು ಮನೆಗೆ ಹೊತ್ತುಕೊಂಡು ಹೋಗಬಹುದು.

ಶ್ರೀ ಪಿ. ರಾಮದೇವ್.—ನೀವೇ ಇಲ್ಲದ್ದಿದ್ದರೆ ಏನು ಮಾಡುತ್ತಿದ್ದಿರಿ ! ೩೧೨ನೇ ನಿಯಮದ ಪ್ರಕಾರ ನಾನೇ ಬೇಕಾದಷ್ಟು ವಿಷಯಗಳನ್ನು ತಂದಿದ್ದೆ. ಅದಕ್ಕೆ ತಾವು ಉತ್ತರಗಳನ್ನು ಮನೆಗೆ ಕಳುಹಿಸಿದ್ದೀರಿ. ಇದರ ಬಗ್ಗೆ ನಾವು ಕೇಳುತ್ತಿದ್ದಾಗ, ಇದೇ ಉತ್ತರವನ್ನು ತಾವು ಕೊಡುತ್ತಿದ್ದಿರಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಉಪಸಭಾಧ್ಯಕ್ಷರೇ, ಸದನ ಮುಗಿದ ಮೇಲೆ ಯಾವುದಾದರೂ ಪ್ರಶ್ನೆಗಳು ಬಾಕಿ ಇದ್ದರೆ, ಅದಕ್ಕೆ ಉತ್ತರವನ್ನು ಸದಸ್ಯರ ಮನೆಗೆ ಕಳುಹಿಸುವ ಪರಿಪಾಠ ಇದೆ, ಇಲ್ಲ ಎಂದು ನಾನು ಹೇಳುವುದಿಲ್ಲ. ನಾವು ಈ ಸದನದ ಮಾನ್ಯ ಸದಸ್ಯರೂ ಹೌದು. ನಾವು ಒಂದು ವಿಷಯದ ಬಗ್ಗೆ ಪ್ರಸ್ತಾಪ ಮಾಡಿ, ಸರ್ಕಾರ ಅದರ ಬಗ್ಗೆ ಹೇಳಿಕೆ ನೀಡಿ, ಆದೇ ಹೇಳಿಕೆಯ ಮೇಲೆ ಪುನಃ ಚರ್ಚೆಯಾಗಿ, ಸರ್ಕಾರ ಅದಕ್ಕೆ ಉತ್ತರವನ್ನು ತರಿಸಿಕೊಡತಕ್ಕ ಪರಿಪಾಠ ಇದೆ. ಮನೆಗೆ ಉತ್ತರವನ್ನೂ

ತೆಗೆದುಕೊಂಡು ಹೋಗಿ ಅದನ್ನು ತಲೆದಿಂಬು ಮಾಡಿಕೊಂಡು ಮಲಗುವುದು ಇದ್ದರೆ ಆ ಪ್ರಶ್ನೆ ಬೇರೆ ಎಲ್ಲಾ ವಿಚಾರಗಳಿಗೂ ತಕ್ಷಣ ಉತ್ತರ ಕೊಡುವುದಕ್ಕೆ ಆಗುವುದಿಲ್ಲ ಎಂಬುದು ನಮಗೆ ಗೊತ್ತಿದೆ. ಈ ನಿಯಮದ ವ್ಯಾಪ್ತಿ, ತೊಂದರೆ, ಇತಿಮಿತಿ ಎಲ್ಲಾ ಗೊತ್ತಿದೆ. ಇದಕ್ಕೆ ಬಹಳ ಮಿತಿ ಇದ್ದರೆ ಕಷ್ಟ ಎಂದೂ ಸಮಿತಿಯಲ್ಲೂ ಸಹ ನಾವು ಮಾತನಾಡಿದ್ದೇವೆ. ಖಾಸಗಿಯಾಗಿಯೂ ಮಾತನಾಡಿದ್ದೇವೆ. ಈ ನಿಯಮದಿಂದ ತಮ್ಮ ಸ್ಥಾನಕ್ಕೂ ತೊಂದರೆ ಆಗುತ್ತದೆ ಎಂಬುದನ್ನೂ ಸಹ ನಾವು ಸಲಹೆ ಮಾಡಿದ್ದೇವೆ.

ಪರಿಶೀಲನೆ ಮಾಡುತ್ತೇವೆ, ಪರಿಶೀಲನೆ ಮಾಡುತ್ತೇವೆಂದು ಕೆಲವೊಂದು ವಿಚಾರಗಳ ಬಗ್ಗೆ ಹೇಳಿದ್ದಾರೆ. ನಾವು ಇಲ್ಲಿ ಕೆಲವೊಂದು ವಿಚಾರಗಳನ್ನು ಪ್ರಸ್ತಾಪ ಮಾಡಿದಾಗ ಅದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು, ಹೇಳಿದರೆ ಅದು ಪತ್ರಿಕೆಗಳ ಮುಖಾಂತರವಾಗಿ ಇಡೀ ಕರ್ನಾಟಕದ ಜನತೆಗೆ ಗೊತ್ತಾಗುತ್ತದೆ. ಮಾನ್ಯ ಶ್ರೀ ಲಕ್ಷ್ಮೀಸಾಗರ್‌ರವರು ಕೆಲವೊಂದು ವಿಚಾರಗಳ ಬಗ್ಗೆ ನೋಡಿಕೊಳ್ತೇನೆ, ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಾರೆ. ಈಗ ಮಾನ್ಯ ಜೆ. ಎಚ್. ಪಟೇಲ್‌ರವರು ಶ್ರೀ ಶಿವಮೂರ್ತಿಯವರಿಗೆ ಮತ್ತಿತರರಿಗೆ ಪುನಃ ವಿಷಯಗಳನ್ನು ಮಾನ್ಯ ಮಂತ್ರಿಗಳವರಿಗೆ ನೆನಪು ಮಾಡಿಕೊಟ್ಟರೆ ಅದಕ್ಕೆ ಉತ್ತರ ಕೊಡುವುದಾಗಿ ಹೇಳಿದರು ಇಲ್ಲಿ ನೆನಪು ಮಾಡಿಕೊಡತಕ್ಕ ಪ್ರಶ್ನೆ ಬರುವುದಿಲ್ಲ. ಇದನ್ನು ೨–೧೦ ದಿವಸಗಳಿಂದ ರಿಮೈಂಡ್ ಮಾಡುತ್ತಿರುವುದಲ್ಲ, ಕೆಲವು ಪ್ರಶ್ನೆಗಳಿಗೆ ೩–೪ ತಿಂಗಳಿಂದ ಇಲ್ಲಿ ಪ್ರಸ್ತಾಪ ಮಾಡಿಹೇಳುತ್ತಿದ್ದಾರೆ. ಕೆಲವು ವಿಷಯಗಳು ಮಾನ್ಯ ಸಚಿವರಿಗೆ ಗೊತ್ತಿಲ್ಲದೇ ಇರಬಹುದು, ಅದನ್ನು ಅವರಿಗೆ ತಿಳುಸುವುದಾಗಿ ಶ್ರೀ ಲಕ್ಷ್ಮೀಸಾಗರ್‌ರವರು ಎಷ್ಟೋ ಸಾರಿ ಜವಾಬ್ದಾರಿ ತೆಗೆದುಕೊಂಡು ಹೇಳಿದ್ದಾರೆ. ಆದಕ್ಕೆ ಅವರಿಗೆ ಡಾಯಿಂಟ್ ರೆಸ್ಪಾನ್‌ಬಿಲಿಟಿ ಇದೆ ಅದರ ಬಗ್ಗೆ ನಾವು ಹೇಳುವುದಿಲ್ಲ. ಆದರೆ ನಾವು ಸದಸ್ಯರು ಇಲ್ಲಿ ಒಂದು ಸಾರಿ ಪ್ರಸ್ತಾಪ ಮಾಡಿ ಹೇಳಿದಾಗ ಅದರ ಬಗ್ಗೆ ಉತ್ತರ ತರಿಸಿಕೊಡುತ್ತೇನೆಂದು ಹೇಳಿದಾಗ ಅದರಂತೆ ಸರ್ಕಾರದವರು ಮಾಡಬೇಕು.

ಉಪಾಧ್ಯಕ್ಷರು.—ಶ್ರೀ ರಾಮದೇವ್‌ರವರು ಕ್ರಿಯಾಲೋಪ ಎತ್ತಿ ಹಿಂದೆಲ್ಲಾ ಯಾವಯಾವ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿಲ್ಲವೋ ಅದಕ್ಕೆಲ್ಲಾ ಆನಂತರ ಅವರವರ ಮನೆಗಳಿಗೆ ಉತ್ತರವನ್ನು ಕಳುಹಿಸಿ ಕೊಡತಕ್ಕ ರೂಢಿ ಇದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಅದನ್ನೂ ನಾನು ಒಪ್ಪುತ್ತೇನೆ.

ಉಪಾಧ್ಯಕ್ಷರು —೩ಗಿಳಿರ ನಿಯಮದ ಕೆಳಗೆ ೫೦–೬೦ ಜನ ಕಳುಹಿಸಿ ಕೊಡುತ್ತಿದ್ದಾರೆ. ೨–೩ ವಿಷಯಗಳನ್ನು ಮಾತ್ರ ಬ್ಯಾಲೆಟ್ ಎತ್ತುವ ಮೂಲಕ ತೆಗೆದುಕೊಳ್ಳತಕ್ಕದ್ದು ರೂಢಿಯಲ್ಲಿ ತಂದಿದ್ದೇವೆ. ಆದರೆ ಇದರಿಂದ ಬಹಳಷ್ಟು ಜನರಿಗೆ ತೊಂದರೆಯಾಗುತ್ತದೆಂದು ಹೇಳಿ ಸಾಕಷ್ಟು ಜನರಿಗೆ ನಿಯಮ ೩೩ಳಿರ ಕೆಳಗೆ ಪ್ರಸ್ತಾಪ ಕೊಡಲು ಅವಕಾಶ ಮಾಡಿಕೊಟ್ಟಿದ್ದೇವೆ. ಈಗ ಉದ್ಭವಿಸಿರತಕ್ಕಂಥ ಪ್ರಶ್ನೆಯ ಬಗ್ಗೆ ನಾನು ರೂಲಿಂಗ್ ಕೊಟ್ಟಿ ಎಂದರೆ ನಿಮಗೇ ತೊಂದರೆಯಾಗುತ್ತದೆ. ಅದಕೋಸ್ಕರವಾಗಿ ಮಾನ್ಯ ಮಂತ್ರಿಗಳವರು ಉತ್ತರ ಕೊಡುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ನಾವು ಗಂಭೀರವಾದ ಪ್ರಶ್ನೆಯನ್ನು ಪ್ರಸ್ತಾಪ ಮಾಡಿ ಹೇಳುತ್ತಿದ್ದೇವೆ. ತಾವು ಇದರ ಬಗ್ಗೆ ರೂಲಿಂಗ್ ಕೊಟ್ಟು ಬಿಟ್ಟರೆ ಸದಸ್ಯರ ಹಕ್ಕನ್ನೇ ಮೊಟಕು ಮಾಡತಕ್ಕ ಸಂಭವವಿರುತ್ತದೆ.

ಉಪಾಧ್ಯಕ್ಷರು.—ನಿಮ್ಮ ಹಕ್ಕನ್ನು ಚಲಾಯಿಸತಕ್ಕ ಸಂದರ್ಭದಲ್ಲಿ ನಿಮ್ಮ ಕರ್ತವ್ಯವನ್ನು ಸಹ ಅರ್ಥ ಮಾಡಿಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ.—ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮನೆಗೇ ಉತ್ತರವನ್ನು ಕಳುಹಿಸತಕ್ಕ ವಿಚಾರವಲ್ಲ. ಕೆಲವು ಸಂದರ್ಭದಲ್ಲಿ ಕೆಲವು ಮಾನ್ಯ ಸಚಿವರುಗಳು ಉತ್ತರವನ್ನು ಮನೆಗೆ ಕಳುಹಿಸಿ ಕೊಟ್ಟಿದ್ದಾರೆ ಕೆಲವರು ಕಳುಹಿಸಿ ಕೊಟ್ಟಿಲ್ಲ. ಅದು ಕೂಡ ಶ್ರೀ ರಾಮದೇವ್‌ರವರಿಗೆ ಗೊತ್ತಿರತಕ್ಕ ವಿಚಾರವೇ ಆಗಿದೆ. ಯಾವ ಪ್ರಶ್ನೆಗಳಿಗೂ ಉತ್ತರ ಕೊಟ್ಟಿಲ್ಲ ಅಂಥವುಗಳಿಗೆ ಉತ್ತರವನ್ನು ಸಂಬಂಧಪಟ್ಟವರ ಮನೆಗೇ ಕಳುಹಿಸಿ ಕೊಡಬೇಕೆಂದು ತಾವು ರೂಲಿಂಗ್ ಕೊಡಿಂತ್ತೇವೆಂದರೆ...

ಉಪಾಧ್ಯಕ್ಷರು.—ಹಾಗೆ ರೂಲಿಂಗ್ ಕೊಡುತ್ತೇನೆಂದು ಹೇಳಲಿಲ್ಲ...

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ರೂಲಿಂಗ್ ಯಾವ ರೀತಿಯಲ್ಲಿ ಬರುತ್ತದೆಯೋ ಎನ್ನುತಕ್ಕದ್ದು.

ಉಪಾಧ್ಯಕ್ಷರು.—ಅದೇ ರೀತಿಯಾಗಿ ರೂಲಿಂಗ್ ಕೊಡುತ್ತೇನೆಂದು ನಾನು ಹೇಳಲಿಲ್ಲ.

SRI S. BANGARAPPA.—We did not want a ruling. In other words, so far as the point of order raised by the hon. Member Sri Ramdev is concerned, we did not wish to press for a ruling. But, the convention is, the Government is bound to reply to the House. That right of hon. Members has not been safeguarded by the hon. Chair. Let them reply before the closure of the day. I am excercising my right. I have got every right to demand the statement from the Government.

ಶ್ರೀ ಬಿ. ಬಿ. ಚಿಮ್ಮನ ಕಟ್ಟಿ.—ಬಹಳ ಗಂಭೀರವಾದ ವಿಷಯವನ್ನು ಪ್ರಸ್ತಾಪ ಮಾಡಿ ಹೇಳುತ್ತಿದ್ದೇವೆ. ಮನೆಗೆ ಉತ್ತರವನ್ನು ಕಳುಹಿಸತಕ್ಕದ್ದು ಸರಿಯಲ್ಲ, ಪ್ರಜಾತ್ರಭುತ್ವದ ರೀತಿಯಾಗಿ ಈ ಸದನದಲ್ಲಿಯೇ ಉತ್ತರವನ್ನು ಕೊಟ್ಟರೆ ಅದು ಪತ್ರಿಕೆಗಳ ಮುಖಾಂತರವಾಗಿ ಇಡೀ ಜನತೆಗೆ ಗೊತ್ತಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಈಗ ಇಲ್ಲಿಯವರೆಗೆ ಯಾವ ಯಾವುದಕ್ಕೆ ಉತ್ತರ ಬಂದಿಲ್ಲವೋ ಅವುಗಳಿಗೆ ಸೀಮಿತವಾಗಿ ಮತ್ತು ಮಾನ್ಯ ಸ್ವಾಮಿರಾವ್‌ರವರ ಪ್ರಶ್ನೆಗೆ ಉತ್ತರವನ್ನು ಅವರ ಮನೆಗೆ ಕಳುಹಿಸಿ ಕೊಡತಕ್ಕ ಜವಾಬ್ದಾರಿಯನ್ನು ಮತ್ತು ಹೊಣೆಗಾರಿಕೆಯನ್ನು ನಾವು ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇವೆ. ಇದನ್ನು ಮಾನ್ಯ ಸದಸ್ಯರು ಕೇಳಿಸಿಕೊಳ್ಳಲಿಲ್ಲವೆಂದು ಕಾಣುತ್ತದೆ.

(ಗೊಂದಲ)

ಶ್ರೀ ಭೀಮಣ್ಣ ಖಂಡ್ರೆ.—ಮನೆಗೆ ಕಳುಹಿಸುತ್ತೇವೆ ಎಂದರೆ ಆಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಮಾನ್ಯ ಸ್ವಾಮಿ ರಾವ್ ಮತ್ತಿತರ ಸದಸ್ಯರುಗಳೇನೂ ಹಲವಾರು ಬಾರಿ ಅನೇಕ ದಿವಾಂಕಗಳೆಂದು ಪ್ರಸ್ತಾಪ ಮಾಡಿ ಕೇಳಿದ್ದಾರೆ ಅದಕ್ಕೆ ಉತ್ತರ ಸಿಕ್ಕಿಲ್ಲವೋ, ಅದಕ್ಕೆ ಉತ್ತರವನ್ನು ಸದನ ಮುಂಗಿದ ನಂತರವೂ ಸಹ ತರಿಸಿ ಅವರ ಮನೆಗಳಿಗೇ ಕಳುಹಿಸಿ ಕೊಡುತ್ತೇವೆಂದು ಹೇಳುತ್ತಿದ್ದೇವೆ. ಅವರಿಗೆ ಉತ್ತರವನ್ನು ತಲುಪಿಸತಕ್ಕ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಿದ್ದೇವೆ ಎನ್ನುವ ಮಾತನ್ನು ಈಗಾಗಲೇ ಹೇಳಿದ್ದೇನೆ. ಎಲ್ಲಾ ಪ್ರಶ್ನೆಗಳಿಗೂ ಇವತ್ತು ಸಾಯಂಕಾಲದೊಳಗೇ ಉತ್ತರವನ್ನು ತರಿಸಿ ಕೊಡಿ ಎಂದರೆ ಆಡಳಿತಾತ್ಮಕವಾಗಿ ಸಾಧ್ಯವಿಲ್ಲ ಎನ್ನತಕ್ಕ ಮಾತನ್ನು ಅವರೂ ಒಪ್ಪುತ್ತಾರೆಂದು ಭಾವಿಸುತ್ತೇನೆ.

ಕೊನೆಯದಾಗಿ ಸಿಸಿಳರ ನಿಯಮದ ವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡು ಇದರ ಬಗ್ಗೆ ವಿಚಾರ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅದು ಬೇಡ.

ಶ್ರೀ ಎ. ಲಕ್ಷ್ಮೀಸಾಗರ್.—ನಿಯಮ ಸಿಸಿಳರ ವ್ಯಾಪ್ತಿಯಂಶ್ನ ಗಮನದಲ್ಲಿಟ್ಟುಕೊಂಡು ಮಾತನಾಡದೇಕು.

ಉಪಾಧ್ಯಕ್ಷರು.—ಮಾನ್ಯಸದಸ್ಯರಾದ ಶಿವಮೂರ್ತಿಗಳು ತಮ್ಮ ಪ್ರಶ್ನೆಗಳಿಗೆ ಉತ್ತರವನ್ನು ತರಿಸಿಕೊಡಬೇಕೆಂದು ಕೇಳುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯಸದಸ್ಯರು ಯಾವ ಯಾವ ವಿಚಾರಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿದ್ದಾರೆ ಎನ್ನುವುದನ್ನು ಮಾಹಿತಿ ಕೊಟ್ಟರೆ, ಅದಕ್ಕೆ ಉತ್ತರಗಳನ್ನು ತರಿಸಿಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಇದು ಸಂಪೂರ್ಣವಾಗಿ ಸರ್ಕಾರದ ಬೇಜವಾಬ್ದಾರಿ ಉತ್ತರವಾಗಿದೆ. ತಾವು ಏನು ಹೇಳುತ್ತೀರಿ. ಅದು ನಮಗೆ ಅರ್ಥವಾಗುತ್ತಿದೆ. ಮತ್ತೆ ನಿಮಗೆ ಪತ್ರಗಳನ್ನು ಕಳುಹಿಸಿ ಕೊಡಬೇಕು ಎಂದರೆ ಪೋಸ್ಟ್ ಆಫೀಸ್ ಕೆಲಸವನ್ನು ಮಾಡುವುದಕ್ಕಾಗಿಯೇ ಜನರು ನಮ್ಮನ್ನು ಆರಿಸಿ

ಕಳಿಸಿದ್ದಾರೆಯೇ ? It is our right to demand a statement from the Government to which they have agreed previously in the month of January, February, and March. ಮತ್ತೆ ಆ ಎಲ್ಲಾ ಪ್ರಶ್ನೆಗಳನ್ನು ನಿಮ್ಮ ಮನೆಗೆ ಕಳುಹಿಸಿ ಕೊಡಬೇಕು ಎಂದು ಹೇಳುವುದಾದರೆ, ಪೋಸ್ಟ್ ಆಫೀಸ್ ಕೆಲಸ ಮಾಡುವುದಕ್ಕೆ ನಾವು ಇಲ್ಲಿ ಬಂದು ಕೂತಿಲ್ಲ Sir, since the Government is coming out with the same good old answer, we are not going to accept it. ಸ್ವಾಮಿ ತಾವು ನಮ್ಮ ರಕ್ಷಣೆಗೆ ಬರಬೇಕು. ಇವತ್ತು ಸಂಜೆ ೫ ಗಂಟೆಯೊಳಗಾಗಿ ಸ್ಟೇಟ್‌ಮೆಂಟ್‌ನ್ನು ಕಳುಹಿಸುವುದಕ್ಕಾಗುವುದಿಲ್ಲವೆಂದು ಅವರು ಈಗಾಗಲೇ ಹೇಳಿದ್ದಾರೆ. We are not in a position to make any statement pertaining to all these matters. ಮಾನ್ಯಸದಸ್ಯರಾದ ಶಿವಮೂರ್ತಿಯವರು, ಸ್ವಾಮಿ ರಾವ್‌ರವರು ಅಥವಾ ಬೇರೆ ಮಾನ್ಯ ಸದಸ್ಯರು ಇರಬಹುದು. ಅವರು ಸ್ಟೇಟ್‌ಮೆಂಟ್‌ನ್ನು ಕೊಡಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿರುವುದರಿಂದ ನಮಗೆ ಇರತಕ್ಕ ಬೇರೆ ಮಾರ್ಗ ಏನು ಎಂಬುದನ್ನು ಹೇಳಬೇಕಾಗಿತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಇದು ಮೂಲಭೂತವಾದ ಪ್ರಶ್ನೆ ನಿಯಮ ೩೩ಳಿರ ಕೆಳಗೆ ಯಾವುದೇ ಒಂದು ಐಟಂಗೆ ಸಂಬಂಧಪಟ್ಟ ವಿಚಾರದಲ್ಲಿ ಮಾತನಾಡುತ್ತಿಲ್ಲ. ನಾವು ನಿಯಮ ೩೩ಳಿರಲ್ಲಿ ರೈಸ್ ಮಾಡುತ್ತಿದ್ದೇವೆ. ಅದಕ್ಕೆ ಕೂಡಲೇ ಉತ್ತರವನ್ನು ಕೇಳುವುದಕ್ಕಾಗುವುದಿಲ್ಲ. ಅವರು ಸಂಜೆಗೆ ಇದ್ದಿದ್ದರೆ ನಾವು ಪ್ರಶ್ನೆ ಮಾಡುತ್ತಿರಲಿಲ್ಲ. ನಾವು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ನೋಡುವುದಕ್ಕೆ ಅವರ ಮನೆಗೆ ಹೋಗುವುದಕ್ಕಾಗುವುದಿಲ್ಲ. ಈ ಸದನದಲ್ಲಿ ಪರಿಶೀಲನೆ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಈ ಸದನ ಮುಗಿಯುವ ಮೊದಲಂ ನಮಗೆ ಉತ್ತರ ಬೇಕು. ಎರಡನೇವಿಚಾರ ಪರಿಶೀಲಿಸುವ ವಿಚಾರ. ಮಾನ್ಯ ಕಾನೂನು ಸಚಿವರು ಹೇಳಿಕೆಯನ್ನು ಕೊಡುವಾಗ, ಇದನ್ನು ಪರಿಶೀಲಿಸುತ್ತೇವೆಂದು ಆಶ್ವಾನೆ ಕೊಟ್ಟಿದ್ದಾರೆ, ಆದ್ದರಿಂದ ಮಾನ್ಯ ಸಚಿವರು ಈ ವಿಚಾರದಲ್ಲಿ ಗಮನಹರಿಸಿ, ಈ ಸಭೆಗೆ ಉತ್ತರವನ್ನು ಕೊಡಬೇಕು. ಅವರು ಹೇಳುವ ರೀತಿಯಲ್ಲಿ ನಾವು ಅವರ ಮನೆಗೆ ಹೋಗುವುದಕ್ಕೆ ತಯಾರಿಲ್ಲ. ಈ ಮನೆಯಲ್ಲಿ ಮಾನ್ಯಸದಸ್ಯರು ಏನಾದರೂ ಒಂದು ವಿಚಾರವನ್ನು ಕೇಳಿದರೆ, ಅದಕ್ಕೆ ಅವರು ಉತ್ತರವನ್ನು ಕೊಡಬೇಕು, ಅವರು ಬಹಳಷ್ಟು ಆಶ್ವಾಸನೆಗಳನ್ನು ಸದಸ್ಯರಿಗೆ ಕೊಟ್ಟು, ಆಶ್ವಾಸನೆಗಳ ರಾಶಿಯನ್ನೇ ಹಾಕಿದ್ದಾರೆ. ಅದನ್ನು ಅವರು ಇಲ್ಲಿಗೆ ತರಲಿ.

ಶ್ರೀ ಜೆ. ಹೆಚ್. ಪಟೇಲ್.—ಬೇರೆ ಬೇರೆ ವಿಧಾನಸಭೆಯಲ್ಲಿ ಮತ್ತು ಲೋಕ ಸಭೆಯಲ್ಲಿ ಇರತಕ್ಕ ಪದ್ಧತಿ ನಮಗೆ ಇವತ್ತು ಮಾರ್ಗದರ್ಶನ. ಲೋಕಸಭೆಯಲ್ಲಿ ಅಧಿವೇಶನ ನಡೆಯುವಾಗ, ಸದನದಲ್ಲಿ ಉತ್ತರವನ್ನು ಕೊಡಬೇಕಾಗಿತ್ತದೆ. ಆದರೆ ಆಲ್ಲಿ ಕೊಡುವುದಕ್ಕೆ ಆಗದೇ ಇರುವ ಪ್ರಶ್ನೆಗಳ ಬಗ್ಗೆ ಯಾವ ಸದಸ್ಯರು ಸರ್ಕಾರದ ಗಮನವನ್ನು ಸೆಳೆದಿದ್ದಾರೆ, ಅವರಿಗೆ ಲಿಖಿತ ಮೂಲಕ ಉತ್ತರವನ್ನು ಅವರ ಮನೆಗಳಿಗೆ ಕಳುಹಿಸಿಕೊಡುತ್ತಾರೆ. ಇವತ್ತು ಪರಿಶೀಲನೆ ಎಂದರೆ ಇದರ ಬಗ್ಗೆ ಗಮನಹರಿಸುತ್ತಾರೆಂದು ಅರ್ಥ. ಒಂದೊಂದು ದಿವಸಕ್ಕೆ ೩೦-೪೦ ಪ್ರಶ್ನೆಗಳು ಬರುತ್ತಿರುತ್ತವೆ. ಆದರೆ ಈಗ ೩೩ಳಿರ ನಿಯಮ ಏನಿದೆ ಅದು ಹೊಸದಾದ ಸಂಪ್ರದಾಯ. ಆದ್ದರಿಂದ ನಿಯಮ ೩೩ಳಿ ರೀತ್ಯಾ ತಕ್ಷಣ ಉತ್ತರ ಕೊಡಬೇಕೆಂದು ಹೇಳುವುದು ಎಲ್ಲೂ ಇಲ್ಲ. ಮತ್ತು ನಿಯಮ ೩೩ಳಿಕ್ಕೆ ಉತ್ತರ ಕೊಡಲೇಬೇಕೆಂದೇನೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಾಗಾದರೆ ಮಾನ್ಯಸದಸ್ಯರು ತಮ್ಮ ಸಮಸ್ಯೆಗಳನ್ನು ಸದನದಲ್ಲಿ ಸರ್ಕಾರದ ಗಮನಕ್ಕೆ ತರುವುದು ಏತಕ್ಕೆ ? ನಾವು ಕೇಳತಕ್ಕ ಪ್ರಶ್ನೆಗಳಿಗೆ ಸರಿಯಾದ ಉತ್ತರ ಸಿಗಂವ ದೃಷ್ಟಿಯಿಂದ ತರುತ್ತೇವೆ. ಆದರೆ ನಿಯಮ ೩೩ಳಿರ ರೀತ್ಯಾ ಸದಸ್ಯರ ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕೆಂದು ಏನೂ ಇಲ್ಲವೆಂದು ಏತಕ್ಕೆ ಹೇಳಬೇಕು ?

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯಮಂತ್ರಿಗಳಾದ ಪಟೇಲ್‌ರವರು ಎರಡು ಅಂಶಗಳನ್ನು ಹೇಳಿದ್ದಾರೆ, ನಿಯಮ ೩೩ಳಿರ ಕೆಳಗೆ ಉತ್ತರ ಕೊಡಲೇಬೇಕೆಂಬ ನಿಯಮ ಏನೂ ಇಲ್ಲವೆಂದು ಹೇಳಿದ್ದಾರೆ. ಸರ್ಕಾರದವರು ಉತ್ತರ ಕೊಡುತ್ತೇವೆಂದು ಹೇಳಿದ್ದರೆ ಅದನ್ನು ಕೊಡಲೇಬೇಕು. ಆದರೆ ಸರ್ಕಾರದವರು ಉತ್ತರವನ್ನು ಕೊಡಲೇಬೇಕೆಂಬ ನಿಯಮ ಇಲ್ಲವೆಂದು ಹೇಳುವುದು ಸರಿಯಲ್ಲ.

ಉಪಾಧ್ಯಕ್ಷರು.—ತಾವು ಇದನ್ನು ಬೇರೆ ರೀತಿಯಲ್ಲಿ ತೆಗೆದುಕೊಳ್ಳಬೇಡಿ. ಎಲ್ಲಾ ಪ್ರಶ್ನೆಗಳಿಗೂ ಸರ್ಕಾರದವರು ಉತ್ತರ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದೂ ಅವರು ಹೇಳಿದ್ದರೆ, ಆಗ ತಾವು

ಹೇಳಿದ ಮಾತು ಬರುತ್ತಿತ್ತು. ಆದರೆ ಯಾವ ಯಾವ ಪ್ರಶ್ನೆಗಳಿಗೆ ಸರ್ಕಾರದವರು ಉತ್ತರ ಕೊಡುತ್ತೇವೆಂದು ಹೇಳಿದ್ದಾರೆ, ಅವುಗಳಿಗೆ ಉತ್ತರ ಕೊಡುತ್ತಾರೆ.

ಶ್ರೀ ಭೀವಣ್ಣ ಖಂಡ್ರೆ.—ಸ್ವಾಮಿ Point of Order. ನಾನು ಹೇಳಿದ್ದು ಏನೆಂದರೆ, ಯಾವುದಾದರೊಂದು ಯೋಜನೆ ಅಥವಾ ಅಭಿವೃದ್ಧಿ ಕಾರ್ಯ ಮಾಡುವ ಸಲುವಾಗಿ ಜಿಲ್ಲೆಯವರು ಭರವಸೆ ಕೊಟ್ಟಿದ್ದರೆ, ಆಗ ಅದು ಭರವಸೆಗಳ ಸಮಿತಿಗೆ ಹೋಗುತ್ತದೆ. ಆದರೆ ಇದು ಭರವಸೆಗಳ ಸಮಿತಿಗೆ ಹೋಗುವುದಿಲ್ಲ. ಆದೇ ಬೇರೆ, ಇದೇ ಬೇರೆ.

ಶ್ರೀ ಜೆ. ಹೆಚ್. ಪಟೇಲ್.—ಹಾಗಾದರೆ ಮಾನ್ಯ ಸದಸ್ಯರ ವಾದದ ಪ್ರಕಾರ ನಮ್ಮದು ಅಶ್ವಾಸನೆ ಅಲ್ಲ. ನಿಮ್ಮ ಪಾಯಿಂಟ್ ಆಫ್ ಆರ್ಡರ್ ನಾವು ಒಪ್ಪಿಕೊಳ್ಳುತ್ತೇನೆ ನೀವು ಕೇಳಿದಂತಹ ಕೆಲವು ಪ್ರಶ್ನೆಗಳಿಗೆ ಉತ್ತರ ಕೊಡಲು, ನಮ್ಮ ಇಲಾಖೆಗಳಿಂದ ಕೆಲವು ಸಂದರ್ಭಗಳಲ್ಲಿ ಉತ್ತರಗಳು ಬಂದಿರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅಲ್ಲಿ ಪೋಲೀಸಿನವರು ಹೊಡೆದಿದ್ದಾರೆ ಎಂದು ಹೇಳುವುದಾದರೆ, ಅದಕ್ಕೂ ಒಂದು ಮಿತಿ ಇದೆ..... ..

ಶ್ರೀ ಜೆ. ಹೆಚ್. ಪಟೇಲ್.—ಅಂಕಾದ್ದಕ್ಕೆ ಅತ್ಯಲ್ಪ ಕಾಲದಲ್ಲಿ ಉತ್ತರ ಕೊಡಬಹುದು.

ಶ್ರೀ ಎಸ್. ಬಂಗಾರಪ್ಪ.—ಅದಕ್ಕೂ ಕೊಟ್ಟಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಎತ್ತಕ್ಕೆ ಕೊಟ್ಟಿಲ್ಲ ಎಂದರೆ ಒಂದು ದಿವಕ್ಕೆ ೨೦-೩೦ ಪ್ರಶ್ನೆಗಳನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿರುತ್ತೇವೆ. ಆದರೆ ಒಂದೊಂದು ಸಾರಿ ಕೊಡದೇ ಇರಬಹುದು. ಈಗ ಕೊಡುತ್ತೇವೆ. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ಉತ್ತರ ಕೊಡಬೇಕಾದ್ದು ನಮ್ಮ ಕರ್ತವ್ಯ ಎನ್ನುವ ವಿಷಯವನ್ನು ನಾನು ಮತ್ತೊಂದು ಸಾರಿ ಹೇಳುತ್ತೇನೆ. ಆದರೆ ಇದು ಇವತ್ತೇ ಆಗಬೇಕು, ಸಂಜೆ ೫ ಗಂಟೆಯೊಳಗೆ ಆಗಬೇಕು ಎನ್ನುವುದು ಅಸಾಧ್ಯ. ಆದರೂ ನಾವು ಉತ್ತರ ಕೊಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಇವತ್ತೇ ವಿಚಾರ ಪ್ರಸ್ತಾಪ ಮಾಡಿ, ಇವತ್ತೇ ಉತ್ತರ ಕೊಡಿ ಎಂದು ಕೇಳಿದಾಗ, ತಾವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ.....ಆದರೆ ಜನವರಿ ತಿಂಗಳಿಂದ ಕೇಳುತ್ತಿದ್ದಾರೆ, ಇವೂ ನೀವು ಕೊಟ್ಟೇ ಇಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಅದಕ್ಕೂ ನಾವು ಉತ್ತರ ಕೊಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಯಾವಾಗ ಕೊಡುತ್ತೀರಿ? ನಾವು ಮಾರ್ಚ್-ಏಪ್ರಿಲ್‌ನಲ್ಲಿ ಕಳಂಹಿಸಿದಕ್ಕೆ ಉತ್ತರ ಕೊಟ್ಟಿಲ್ಲವಲ್ಲಾ ಅದನ್ನು ನಾವು ಕೇಳುತ್ತಾ ಇರುವುದು, ಇದರ ಬಗ್ಗೆ ವಾದ ಬೇಡ. ವಾದ ಮಾಡಿದರೆ ಸಿಕ್ಕಿಹಾಕಿಕೊಳ್ಳುತ್ತೀರಿ.

ಶ್ರೀ ಜೆ.ಹೆಚ್. ಪಟೇಲ್.—ಮಾನ್ಯ ಸಚಿವರು ಈ ಬಗ್ಗೆ ಏನು ಒಂದು ಹೇಳಿಕೆ ಕೊಟ್ಟರೋ ಅದನ್ನು ವಡಿಸಿಕೊಡೋಣ ಎಂದು ನಾನು ಎದ್ದು ನಿಂತರೆ ಅದೂ ಬೇಡ ಎಂದರೆ ನಾನು ಕೂತುಕೊಳ್ಳುತ್ತೇನೆ.

ಉಪಾಧ್ಯಕ್ಷರು —ತಾವು ರೂಲ್ ೩೩ರ ಪ್ರಕಾರ ಇದನ್ನು ರೈಸ್ ಮಾಡಿದ್ದೀರಿ. ನೀವು ಎಷ್ಟು ಪ್ರಶ್ನೆಗಳನ್ನು ಕೇಳಿದ್ದೀರಿ ಅದಕ್ಕೆ ಕೆಲವು ಉತ್ತರ ಹೇಳಿದ್ದಾರೆ ಬಾಕಿದನ್ನು ಪರಿಶೀಲಿಸುತ್ತೇನೆಂದು ಹೇಳಿದ್ದಾರೆ. ಹಾಗೆ ಅವರು ಪರಿಶೀಲಿಸುತ್ತೇನೆಂದು ಹೇಳಿದ ಮೇಲೂ ಸಹ ಈ ಸಭೆ ವಂತಿಯಂತೆ ಮುಂಚಿತವಾಗಿ ನನಗೆ ಉತ್ತರ ಕೊಡಬೇಕು ಎಂದರೆ ಅದು ಬಹಳ ಕಷ್ಟವಾಗುತ್ತದೆ. ಅದಕೋಸ್ಕರವಾಗಿ ನಾನು ನಿಯಮ ೩೩ರ ಬಗ್ಗೆ ರೂಲಿಂಗ್ ಕೊಟ್ಟು ಬಿಡುತ್ತೇನೆ. ಈ ಬಗ್ಗೆ ಎಲ್ಲಾ ಸದಸ್ಯರೂ ಹೇಳಿದ್ದನ್ನು ನಾನು ಅರ್ಥಮಾಡಿಕೊಂಡಿದ್ದೇವೆ ತವಂಗೂ ಚೆನ್ನಾಗಿ ಗೊತ್ತಿದೆ. ತಾವು ಈ ರೀತಿ ಹೇಳಿ ಅಧ್ಯಕ್ಷರನ್ನು ಇಕ್ಕಟ್ಟಿಗೆ ಸಿಕ್ಕಿಸಿ ಹಾಕಬೇಕು ಅಂತ ಮಾಡುತ್ತಿದ್ದೀರಿ ಅನ್ನುವುದನ್ನು ನನಗೆ ಅರ್ಥವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ತಾವು ಆ ಮಟ್ಟಕ್ಕೆ ಹೋಗಬಾರದು. ನಾನು ಅರ್ಥ ಮಾಡಿಕೊಂಡಿದ್ದೇವೆ. ನೀವು ಸಮ್ಮ ಬಗ್ಗೆ ಬೇರೆ ರೀತಿಯಾಗಿ ಅರ್ಥ ಮಾಡಿಕೊಳ್ಳಬಾರದು. ಅಧ್ಯಕ್ಷರಿಗೆ ನಿಯಮ ೩೩ರ ವ್ಯಾಪ್ತಿ ಬಹಳ ಕಷ್ಟ ಇದೆ ಎನ್ನುವುದು ನಮಗೂ ಗೊತ್ತಿದೆ. ನಿಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕು ಅಂತ ಆ ಅಭಿಪ್ರಾಯದಲ್ಲಿ ನಾವು ಹೇಳಿಲ್ಲ. ನಾನು ಬೇರೆ ಅರ್ಥದಲ್ಲಿ ಹೇಳಿದ್ದೇವೆ.

ನೀವು ಬೇರೆ ಅರ್ಥ ಮಾಡಿಕೊಳ್ಳಬಾರದು. Under rule 334, you cannot curtail our rights.

MR. DEPUTY SPEAKER.—When a position arose to an extent, where both the Members of Parties are not in a position to resolve on this.....

ಶ್ರೀ ಎಸ್. ಬಂಗಾರಪ್ಪ.—ನೀವು ಈವಾಗಲೇ ರೂಲಿಂಗ್ ಕೊಟ್ಟು ಬಿಟ್ಟರೆ ಬಹಳ ಕಷ್ಟ ವಾಗುತ್ತದೆ.

ಉಪಾಧ್ಯಕ್ಷರು.—ಹಾಗಾದರೆ ಇನ್ನೂ ಎಷ್ಟು ಹೊತ್ತಿನವರಿಗೆ ಈ ಸಬ್ಜೆಕ್ಟ್ ಅನ್ನು ಎಳೆದು ಕೊಂಡು ಹೋಗಬೇಕು ಅಂತ ಮಾಡುತ್ತಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಚಿವರು ಸರಿಯಾಗಿ ನಮಗೆ ಸಮಾಧಾನವಾಗಿ ಉತ್ತರ ಕೊಟ್ಟರೆ ನಾವು ಒಪ್ಪಿಕೊಳ್ಳುತ್ತೇವೆ. ಈಗ ತಾವು ಏನು ರೂಲಿಂಗ್ ಕೊಡುತ್ತೀರೋ ಅನ್ನುವುದು ನಮಗೆ ಗೊತ್ತಿಲ್ಲ ಬಹುಶಃ ಇದರ ಬಗ್ಗೆ ನೀವು ಏನು ರೂಲಿಂಗ್ ಕೊಡುತ್ತೀರೋ ಅನ್ನುವುದು ನಿಮಗೇ ಗೊತ್ತಿಲ್ಲ ಎಂದು ನಾನು ತಿಳಿದಿದ್ದೇನೆ.

ಉಪಾಧ್ಯಕ್ಷರು.—ಹೌದು.

ಶ್ರೀ ಎಸ್. ಬಂಗಾರಪ್ಪ.—ನಾವು ಇದನ್ನೇ ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇವೆಂದರೆ ಸರ್ಕಾರ ದವರು ಇದರ ಬಗ್ಗೆ ಏನಾದರೂ ಉತ್ತರ ಕೊಡಬಹುದು ಅನ್ನುವ ಆಸೆ ಇದೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮಾತನಾಡುವಾಗ ನೀವು ಇದರ ಬಗ್ಗೆ ಏನು ರೂಲಿಂಗ್ ಕೊಡುತ್ತೀರೋ ಅದು ನಿಮಗೇ ಗೊತ್ತಿಲ್ಲ ಎಂದರೆ ಏನು ಅರ್ಥ ಅದನ್ನು ಕೇಳಿಕೊಂಡು ತಾವು ಸುಮ್ಮನೆ ಕೂತಿದ್ದೀರಲ್ಲಾ ?

ಉಪಾಧ್ಯಕ್ಷರು.—ಈಗ ನನಗೆ ಗೊತ್ತಿದೆ.

SRI. S. BANGARAPPA.—Mr. Jalappa these are all delicate issues which you cannot understand. we cannot question the ruling after the ruling by the Chair. perhaps we are setting a very very bad convention.

MR. DEPUTY SPEAKER.—Why do you assume ?

ಶ್ರೀ ಪಿ. ರಾಮ್‌ದೇವ್.—ಈಗ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಇನ್ನು ಸಾಕು ಮಾಡಿ.

ಶ್ರೀ ಎಸ್. ಬಂಗಾರಪ್ಪ.—ನಾನು ನಿಮಗೆ ರೂಲಿಂಗ್ ಕೊಡುವುದಕ್ಕೆ ಬರುವುದಿಲ್ಲ ಎಂದು ಹೇಳಲಿಲ್ಲ. ನೀವು ಈ ಸಬ್ಜಕ್ಟ್‌ನಲ್ಲಿ ಏನು ರೂಲಿಂಗ್ ಕೊಡುತ್ತೀರೋ ಅನ್ನುವುದು ನಮಗೆ ಗೊತ್ತಿಲ್ಲದೇ ಇರಬಹುದು. ಶ್ರೀ ಆರ್. ಎಲ್. ಜಾಲಪ್ಪನವರಿಗೆ ನಾನು ಒಂದು ಮಾತು ಹೇಳುತ್ತೇನೆ. ಫಾರ್ ದಿ ಸೇಕ್ ಆಫ್ ಆರ್ಗ್ಯುಮೆಂಟ್ ನಾವು ಸುಮ್ಮನೆ ಇದ್ದೇವೆ ಅವರು ಈ ಬಗ್ಗೆ ಏನು ನಿರ್ಣಯ ಕೊಡಬಹುದು ಎನ್ನುವುದು ಗೊತ್ತು. ನಾವು ಕೇಳುವುದು ಇಷ್ಟೆ. ಮಾನ್ಯ ಸಚಿವರು ಇದರ ಬಗ್ಗೆ ಏನು ಹೇಳಿಕೆ ಕೊಡುತ್ತೇವೆಂದು ಹೇಳಿದರೋ ಅದನ್ನು ಇಲ್ಲಿಯವರೆಗೂ ಏತಕ್ಕೆ ಕೊಡಲಿಲ್ಲ ಅನ್ನುವುದೇ ನಮ್ಮ ಪ್ರಶ್ನೆ. ಏತಕ್ಕೆ ಡಿಲೇಯಾಗಿದೆ. ಅನುವುದನ್ನೂ ಸಹ ಅವರು ಹೇಳಲಿಲ್ಲ. ಅವರು ಕಾರಣ ವನ್ನೂ ಸಹ ಇದಕ್ಕೆ ಕೊಟ್ಟಿಲ್ಲ. ನಾಳೆ ದಿವಸ ಅವರೇನಾದರೂ ಕೂಡ ಇದರ ಉತ್ತರವನ್ನೂ ಮನೆಗೆ ಕಳುಹಿಸಿಕೊಟ್ಟರೆ. ಯಾವುದಾದರೂ ಕೆರೆ ಬಗ್ಗೆ ಕೇಳಿದರೆ ಅದನ್ನು ನಿರ್ಣಯನೇ ಇಸವಿಗೆ ಮಾಡಿಸಿ ಕೊಡುತ್ತೇವೆಂದು ಭರವಸೆ ಕೊಟ್ಟರೆ ಅದು ಅಶ್ಯೂರೆನ್ಸ್ ಕಮಿಟಿಗೆ ಹೋಗುತ್ತದೆಯೇ ? ಆದರ ಬಗ್ಗೆ ಮಾನ್ಯ ಸಚಿವರು ಹೇಳಿಕೆಯನ್ನೇ ಕೊಟ್ಟಿಲ್ಲ. ಆದುದರಿಂದ ಇದರ ಬಗ್ಗೆ ರೂಲಿಂಗ್ ಕೊಡುವಾಗ ಇದನ್ನೆಲ್ಲಾ ಗಮನಿಸಬೇಕಾಗಿದೆ. ಇಂಥಾದ್ದನ್ನೆಲ್ಲಾ ಅಶ್ಯೂರೆನ್ಸ್ ಕಮಿಟಿಗೆ ಕಳುಹಿಸಬೇಕಾಗಿದೆ. ತಾವು ಉತ್ತರವನ್ನು ಮನೆಗೆ ಕಳುಹಿಸಿಕೊಟ್ಟು ಪೋಸ್ಟ್ ಆಫೀಸ್ ತರಹ ಕೆಲಸ ಮಾಡಿದರೆ ನಾವು

ಅಸೆಂಬ್ಲಿಯಲ್ಲಿ ಕೆಲಸ ಮಾಡುವುದಕ್ಕೆ ಕಷ್ಟವಾಗಂತ್ತದೆ. Perhaps we are setting a very very bad convention.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಈ ರೀತಿ ಹೇಳಬೇಡಿ. ಹೀಗೆ ಹೇಳಿ ಹೆದರಿಸಬೇಡಿ, ಬೆದರಿಸಬೇಡಿ.

ಶ್ರೀ ಎಸ್. ಬಂಗಾರಪ್ಪ.—ರೂಲಿಂಗ್ ಕೊಟ್ಟಮೇಲೆ ಸಾವೂ ಏನೂ ಅದರ ಮೇಲೆ ಪ್ರಶ್ನೆ ಮಾಡುವ ಹಾಗಿಲ್ಲ. ಅದು ತಮಗೂ ಗೊತ್ತಿದೆ. ಅದಕ್ಕೆ ಇದಕ್ಕೊಂದು ಇತಿಮಿತಿ ಇರಬೇಕು ಅನ್ನುವ ಉದ್ದೇಶದಿಂದ ಹೇಳುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಅಧ್ಯಕ್ಷರನ್ನು ಮನವೊಲಿಸಿ ಕೆಲಸ ಮಾಡಿಕೊಳ್ಳಬೇಕೇ ವಿನಾಃ ಈರೀತಿಯಾಗಿ ಅವರಿಗೆ ಎಚ್ಚರಿಕೆ ಕೊಡುವುದಾದರೆ ಅದು ಬೆದರಿಕೆ ಕೊಡುವುದಾದರೆ ಅದು ಸರಿಯಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಆ ರೀತಿಯಾಗಿ ತಿಳಿದುಕೊಂಡಿಲ್ಲ. I do not think we can question the ruling of the Chair. I have got great respect for the Chair.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ದಯವಿಟ್ಟು ಈ ರೀತಿ ಹೇಳಬೇಡಿ.

SRI. S. BANGARAPPA.—In the pretext of giving a ruling if our rights are being curtailed, which we have to exercise to the best possible extent ನಾನು ಈ ಮಾತನ್ನು ಪದೇ ಪದೇ ಹೇಳುತ್ತಿದ್ದೇನೆ. ನಾನು ತಮ್ಮನ್ನು ಬೆದರಿಕೆ ಮಾಡಬೇಕು, ಹೆದರಿಸಬೇಕು ಅನ್ನುವ ಅರ್ಥದಲ್ಲಿ ಹೇಳುತ್ತಾ ಇಲ್ಲ. ಇದರ ಬಗ್ಗೆ ನಿಮ್ಮ ಅರ್ಥ ಏನು ಇದೆಯೋ ನನಗೆ ಗೊತ್ತಿಲ್ಲ. ತಾವು ರೂಲಿಂಗ್ ಕೊಡುವ ಮುನ್ನ ಯೋಚಿಸಿ ಮಾಡಬೇಕು. ಅವರು ಉತ್ತರವನ್ನು ಮನೆಗೆ ಕಳುಹಿಸಿಕೊಟ್ಟರೆ ಏನು ಮಾಡುವುದು ?

MR. DEPUTY SPEAKER.—Why do you assume ?

ಶ್ರೀ ಜಿ. ಪಿ. ಪಟೇಲ್.—ಹಾಗಾದರೆ ಅದನ್ನು ಸದಸ್ಯರಿಗೆ ಕಳುಹಿಸುವುದು ಬೇಡ. ಅದಂ ಅಶ್ಯೂರೆನ್ಸ್ ಕಮಿಟಿಗೇನೇ ಹೋಗಲಿ.

ಶ್ರೀ ಎಸ್. ಬಂಗಾರಪ್ಪ.—ಅದು ಅಶ್ಯೂರೆನ್ಸ್ ಕಮಿಟಿಗೇನೇ ಹೋಗಲಿ. ಹಾಗೇ ಮಾಡೋಣ. ಆದರೆ ಒಂದು ವಿಚಾರ, ಈ ಸದನದಲ್ಲಿ ಅವರು ಹೇಳಿಕೆ ಕೊಡುತ್ತೇವೆಂದು ಹೇಳಿದ ಮೇಲೆ ಹಾಗೆ ಹೇಳಿಕೆ ಕೊಡದೇ ಹೋದರೆ ಅದು ಅಶ್ಯೂರೆನ್ಸ್ ಕಮಿಟಿಗೆ ಹೋಗುವುದಕ್ಕಾಗುವುದಿಲ್ಲವೇ ?

ಶ್ರೀ ಎ. ಲಕ್ಷ್ಮೀಸಾಗರ.—ಮಾನ್ಯ ಸದಸ್ಯರು ಯಾವುದಕ್ಕೂ ಕೂಡ ಒಂದು ಸಮಾಧಾನಕ್ಕೆ ಬರುವ ರೀತಿಯಲ್ಲೇ ಇಲ್ಲ.

SRI. S. BANGARAPPA.—If they are going to send the reply to the residential address of the hon. Member, we are not going to accept it. We are not going to tolerate when our rights are being curtailed. we are not prepared to accept that.

SRI MALLIKARJUN M. KHARGE.—I would like to know, what are the reasons for not giving reply to the hon. Member even after a lapse of about 4/5 months.
ನಮಗೆ ಇದರ ಬಗ್ಗೆ ಕೇಳುವುದಕ್ಕೆ ಹಕ್ಕು ಇದೆ, ಅದನ್ನು ಯಾರೂ ಸಹ ಕಟ್ ಮಾಡುವುದಕ್ಕಾಗುವುದಿಲ್ಲ. ಹಾಗೇನಾದರೂ ಕಟ್ ಮಾಡುವುದಾದರೆ ನಮ್ಮ ಹಕ್ಕಿನ ಬಗ್ಗೆ ಪ್ರತಿವಾದನೆ ಮಾಡುವುದಕ್ಕೆ ನಾವು ಇಲ್ಲೇ ಕೂತು ಕೊಳ್ಳಬೇಕಾಗುತ್ತದೆ.

ಶ್ರೀ ಆರ್. ಎಲ್. ಜಾಲಪ್ಪ.—ಅವರು ಹೇಳಿದ್ದು ಸ್ವಲ್ಪವೂ ಅರ್ಥವಾಗುವುದಿಲ್ಲ.

ಶ್ರೀ ಪಿ. ರಾಮದೇವ್.—ಮಾನ್ಯ ಬಂಗಾರಪ್ಪನವರು ಒಂದು ಹೊಸ ಸಂಪ್ರದಾಯವನ್ನು ಹಾಕಿ ಅದನ್ನು ಈ ಸದನದಲ್ಲಿ ಮುಂಡಿಸಿದ್ದಾರೆ. ಇದು ಬಹಳ ವಿಚಿತ್ರವಾಗಿ ಕಾಣುತ್ತಾ ಇದೆ. ಈ ೩೩೪ನೇ ರೂಲಿನಲ್ಲಿ ಇದರ ಬಗ್ಗೆ ಕ್ಲಿಯರ್ ಆಗಿಯೇ ಇದೆ.

ಶ್ರೀ ಭೀವಣ್ಣ ಖಂಡ್ರೆ.—ಮಾನ್ಯ ಸಚಿವರು ಏತಕ್ಕೆ ಡಿಲೇ ಆಯಿತು ಅನ್ನುವುದನ್ನು ಹೇಳಲೇ ಇಲ್ಲವಲ್ಲ. ಅವರು ಳೆ ತಿಂಗಳಾದರೂ ಕೂಡ ಇದಕ್ಕೆ ಉತ್ತರ ಕೊಡಲಿಲ್ಲ ಎಂದರೆ ಹಾಗೆ ಕೇಳುವುದು ತಪ್ಪೇ ?

ಶ್ರೀ ಪಿ. ರಾಮದೇವ್.—ತಾವು ರೂಲ್ ೨೮೧ ಓದಿದರೆ ಗೊತ್ತಾಗುತ್ತದೆ. ಅದರಲ್ಲಿ ಕ್ಲಿಯರ್ ಆಗಿ ಇದೆ.

ಶ್ರೀ ಎಸ್. ಬಂಗಾರಪ್ಪ.—ಅವರು ಹೇಳಿಕೆ ಕೊಡುವುದರಿಂದಲೇನೇ ನಾವು ಕೇಳುತ್ತಾ ಇರುವುದು.

ಶ್ರೀ ಪಿ. ರಾಮದೇವ್.—ಈ ಸದನದಲ್ಲಿ ಆಗಾಗ್ಗೆ ಏನು ಆಶ್ವಾಸನೆಯನ್ನು ಮಾನ್ಯ ಸಚಿವರು ಕೊಡುತ್ತಾರೆ ಅವೆಲ್ಲಾ ಅಶ್ಯೂರೆನ್ಸ್ ಕಮಿಟಿಗೆ ಹೋಗತಕ್ಕಂಥಾದ್ದು ಎನ್ನುವುದು ಇದೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ರೂಲ್ ೩೩೪ರ ಪ್ರಕಾರ ಅದರ ವ್ಯಾಪ್ತಿಯಲ್ಲಿ ಬರತಕ್ಕಂಥಾದ್ದನ್ನು ಉತ್ತರ ಕೊಡುವುದಕ್ಕೆ ಒಪ್ಪಿಕೊಂಡಿದ್ದೇವೆ. ಹಲವಾರು ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದೇವೆ. ಕೆಲವಕ್ಕೆ ಕೊಡದೇ ಹೋದ ಮಾತ್ರಕ್ಕೆ.....

ಉಪಾಧ್ಯಕ್ಷರು.—ಅವರು ಇದಕ್ಕೆ ಉತ್ತರ ಹೇಳಿದ್ದಾರಲ್ಲ. ಇನ್ನು ಸಾಕು.

ಶ್ರೀ ಜೆ. ಹೆಚ್. ಪಟೇಲ್.—ಸ್ವಾಮಿ, ಒಂದಲ್ಲ, ಎರಡಲ್ಲ ಬೇಕಾದಷ್ಟಕ್ಕೆ ಉತ್ತರ ಕೊಟ್ಟಿದ್ದೇವೆ. ಕೆಲವಕ್ಕೆ ಉತ್ತರ ಕೊಡದೇ ಇರಬಹುದು.

ಶ್ರೀ ಎಸ್. ಬಂಗಾರಪ್ಪ.—೮ ಸಾವಿರ ಇದ್ದರೂ ಕೂಡ ಅಷ್ಟಕ್ಕೂ ಉತ್ತರ ಕೊಡಬೇಕಾಗುತ್ತದೆ ಅಡ್ಮಿನಿಸ್ಟ್ರೇಷನ್ ರನ್ ಮಾಡುವವರು ಇದಕ್ಕೆಲ್ಲಾ ಉತ್ತರ ಕೊಡಬೇಕು. ಏತಕ್ಕೆ ಇದರ ಬಗ್ಗೆ ತಾವು ಆಸಕ್ತಿ ವಹಿಸುತ್ತಿಲ್ಲ. ಅದು ೮ ಸಾವಿರವೇ ಇರಲಿ, ೧೦ ಸಾವಿರವೇ ಇರಲಿ, ಈ ಪ್ರಶ್ನೆ ೮ ಇರಲಿ, ೧೦ ಇರಲಿ ಈ ಪ್ರಶ್ನೆ ಬಂದೇ ಬರುತ್ತದೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಸದಸ್ಯರು ಹೇಳಿದ ಹಾಗೆ ಅದು ಎರಡೇ ಇರಲಿ, ೧೦ ಇರಲಿ ಆ ಪ್ರಶ್ನೆ ಬಂದೇ ಬರುತ್ತದೆ, ಎಷ್ಟು ಪ್ರಶ್ನೆಗಳಿಗೆ ಉತ್ತರ ಕೊಡಬೇಕೆಂದು ಒಪ್ಪಿಕೊಂಡಿದ್ದೇವೋ ಅಷ್ಟು ಪ್ರಶ್ನೆಗಳಿಗೆ ಉತ್ತರವನ್ನು ಭರವಸೆ ಸಮಿತಿಯ ಮುಂದಾದರೂ ಕೊಡುತ್ತೇವೆ. ಈ ಮನೆಯ ಸದಸ್ಯರುಗಳಿಗೆ ಕೂಡ ಕೊಡುತ್ತೇವೆ, ಇವತ್ತೇ ಕೊಡಬೇಕೆಂದರೆ ಹೇಗೆ ?

ಶ್ರೀ ಎಸ್. ಬಂಗಾರಪ್ಪ.—ಇದನ್ನು ಕೇಳುವುದಕ್ಕೆ ನಾವು ಬಂದಿಲ್ಲ

ಶ್ರೀ ಜೆ. ಹೆಚ್. ಪಟೇಲ್.—ತಾವು ತಮ್ಮ ತೀರ್ಪನ್ನು ಕೊಡಬಹುದು.

ಶ್ರೀ ಎಸ್. ಬಂಗಾರಪ್ಪ.—ಯಾವರೀತಿ ತೀರ್ಪು ಕೊಡುತ್ತಾರೆ ? ಕಾರಣ ಗೊತ್ತಿಲ್ಲದೆ ತೀರ್ಪು ಹೇಗೆ ಕೊಡುತ್ತಾರೆ.

ಶ್ರೀ ಭೀವಣ್ಣ ಖಂಡ್ರೆ.—ಅಧಿಕಾರಿಗಳು ಇವರ ಕೈಯಲ್ಲಿ ಇಲ್ಲ, ಇವರಿಗೆ ಶಕ್ತಿ ಇಲ್ಲ. ಇರೆಲೆವೆಂಟ್ ಪಾಯಿಂಟ್ ಏತಕ್ಕೆ ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ರೂಲಿಂಗ್ ಕೊಡುವಂಥ ಪ್ರಶ್ನೆ ಬರುವುದು ಯಾವಾಗ ? ಉತ್ತರ ಸಮರ್ಪಕವಾಗಿದ್ದರೆ ಒಪ್ಪಿಕೊಳ್ಳಬಹುದು. ಇಲ್ಲದೇ ಹೋದರೆ ಆಶ್ವಾಸನೆ ಸಮಿತಿಗೆ ಕಳುಹಿಸಬಹುದು. ಇಲ್ಲಿ ಸರ್ಕಾರದ ಹೇಳಿಕೆ ಇಲ್ಲದೇ ಇರುವಾಗ ಆಶ್ವಾಸನೆ ಸಮಿತಿಗೆ ಕಳುಹಿಸುತ್ತೆ ಎಂದು ಹೇಳುವುದು ಯಾವ ನ್ಯಾಯ ?

ಶ್ರೀ ಭೀವಣ್ಣ ಖಂಡ್ರೆ.—ತಾವು ನಮಗೆ ರಕ್ಷಣೆ ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ನಮಗೆ ಅಧ್ಯಕ್ಷರ ಬಗ್ಗೆ ಅಪಾರವಾದ ಗೌರವ ಇದೆ. ಅದನ್ನು ಮುಂದುವರಿಸಿಕೊಂಡು ಹೋಗುತ್ತೇವೆ. ಆದರೆ ಈ ವಿಷಯವನ್ನು ಆಶ್ವಾಸನೆ ಸಮಿತಿಗೆ ಕಳುಹಿಸಿದರೆ. ಬಲವಾಗಿ ಆಕ್ಷೇಪಣೆ ಹಾಡಬೇಕಾಗುತ್ತದೆ.

ಉಪಾಧ್ಯಕ್ಷರು.—ಬಂಗಾರಪ್ಪನವರೇ, ತಾವು ವಕೀಲರಾಗಿ ಕೆಲಸ ಮಾಡಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ಶಾಸಕನಾಗಿ ಕೂಡ ಕೆಲಸ ಮಾಡಿದ್ದೇನೆ.

ಉಪಾಧ್ಯಕ್ಷರು.—ಶಾಸಕರಾಗುವುದಕ್ಕೆ ಮುಂಚೆ ಲಾಯರಾಗಿ ಕೆಲಸ ಮಾಡಿದ್ದೀರಿ. ಕೋರ್ಟಿನಲ್ಲಿ ಎರಡು ಕಡೆಯವಾದ ನಡೆಯುತ್ತಿದೆ. ನ್ಯಾಯಾಧೀಶರನ್ನು ಹೀಗೆ ಮಾಡಿ ಎಂದು ಒತ್ತಾಯ ಮಾಡುವುದಕ್ಕಾಗುವುದಿಲ್ಲ ೩೩೪ರ ನಿಯಮ ಇರತಕ್ಕಂಥಾದ್ದು ಸದಸ್ಯರ ಅನುಕೂಲಕ್ಕೋಸ್ಕರ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ, ಇದರ ಬಗ್ಗೆ ಚರ್ಚೆ ಮಾಡಬೇಡವೆಂದು ಬೇಡ. ಮಂತ್ರಿಯವರು ಉತ್ತರ ಕೊಡುತ್ತೇವೆಂದು ಹೇಳಿದವರು ಏತಕ್ಕೆ ಕೊಡಲಿಲ್ಲ ? ಇಷ್ಟು ಹೇಳುವುದಕ್ಕೆ ಏನಂ ತೊಂದರೆ ಇದೆ.

ಶ್ರೀ ಸಿ. ಭೈರೇಗೌಡ.—ಸ್ವಾಮಿ, ೩೩೪ರ ನಿಯಮದ ಪ್ರಕಾರ ಸರ್ಕಾರದವರು ಉತ್ತರ ಕೊಡಬಹುದಂ, ಬಿಡಬಹುದಂ. ಕೊಡಲೇಬೇಕೆಂದು ಇಲ್ಲ.

(ಗೊಂದಲ)

ಉಪಾಧ್ಯಕ್ಷರು.—ಭೈರೇಗೌಡರೇ, ತಾವು ಈಗ ಬಂದಿದ್ದೀರಿ. ಬೆಳಿಗ್ಗೆ ತಾವು ಇರಲಿಲ್ಲ.

ಶ್ರೀ ಸಿ. ಭೈರೇಗೌಡ.—ಸ್ವಾಮಿ, ನಾನು ಮೊದಲಿನಿಂದಲೂ ಕುತೂಹಲಂಕೊಂಡು ಕೇಳಿದ್ದೇನೆ. ೩೩೪ರ ನಿಯಮದಲ್ಲಿ ಉತ್ತರ ಕೊಡಲೇಬೇಕೆಂದಿಲ್ಲ, ತಾವು ಇದರ ಬಗ್ಗೆ ರೂಲಿಂಗ್ ಕೊಡಬೇಕಂ.

ಶ್ರೀ ಬಿ. ರಾಚಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರದ ಪರವಿಯಿಂದ ಮಾನ್ಯ ಸದಸ್ಯರುಗಳು ಎತ್ತಿದಂಥ ಯಾವ ನಮೂನೆಯ ಪ್ರಶ್ನೆಗಳಾದರೂ ಉತ್ತರ ಕೊಡುತ್ತಾ ಬಂದಿದ್ದೇವೆ. ಇವತ್ತು ಏಯಮ ೩೩೪ರ ಮೇರೆಗೆ ೧೦ಕ್ಕೂ ಮೇಲ್ಪಟ್ಟು ವಿಷಯಗಳಂ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸದಸ್ಯರುಗಳು ಅವರ ಮನಸ್ಸಿನಲ್ಲಿ ಬಹಳ ಗಹನವಾಗಿರತಕ್ಕ ವಿಷಯಗಳನ್ನು ತರುವ ಉದ್ದೇಶ ಇಟ್ಟು ಕೊಂಡಿರಬಹುದು. ಸಾಧ್ಯವಾದ ಮಟ್ಟಿಗೆ ಅದಕ್ಕೂ ಕೂಡ ಉತ್ತರಗಳನ್ನು ತರಿಸಿಕೊಡುತ್ತೇವೆ. ಒಂದೊಂದು ಸಂದರ್ಭದಲ್ಲಿ ವಿಷಯಗಳು ಜ್ಞಾಪಕದಲ್ಲಿದ್ದರೆ ಕೂಡಲೇ ಉತ್ತರ ಕೊಡಲಾಗುವುದು. ಇಲ್ಲದೇ ಹೋದರೆ ತರಿಸಿಕೊಡಬೇಕಾಗುತ್ತದೆ. ಇನ್ನು ಕೆಲವು ಸಾರಿ ಜಾಹಿತಿಗಳನ್ನು ಒದಗಿಸಿಕೊಳ್ಳಬೇಕಾಗುತ್ತದೆ. ಮಾನ್ಯ ಲಕ್ಷ್ಮೀಸಾಗರ್‌ರವರು ಸಂಕಷ್ಟ ಮಂತ್ರಿಗಳಾಗಿರುವುದರಿಂದ ಬೇರೆ ಬೇರೆ ಮಂತ್ರಿಗಳು ಬಾರದಿದ್ದರೂ, ವಿಷಯ ತರಿಸಿ ಕೊಡುತ್ತೇನೆಂದು ಹೇಳಿರುತ್ತಾರೆ. ಅದನ್ನೇ ತಪ್ಪು ಎಂದು ಹೇಳಿದರೆ ಕಷ್ಟವಾಗುತ್ತದೆ. ಉತ್ತರ ತರಿಸಿಕೊಡುವುದಕ್ಕೆ ಕಾಲಾವಕಾಶ ಕೊಡಿ, ಮುಂದಿನ ಕಾರ್ಯಕಲಾಪಗಳಂ ನಡೆಯಲಿಯೆಂದು ಹೇಳುತ್ತೇನೆ.

ಉಪಾಧ್ಯಕ್ಷರು.—ಒಂದೆರಡು ದಿವಸದಲ್ಲಿ ತರಿಸಿಕೊಡುತ್ತೇವೆಂದು ಹೇಳಿದರೂ ಮೂರು ತಿಂಗಳಾದರೂ ಏತಕ್ಕೆ ಉತ್ತರ ಬರಲಿಲ್ಲವೆಂದು ಕೇಳುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಮೂರು ತಿಂಗಳ ಹಿಂದೆ, ಜನವರಿಯಂಲ್ಲಿ ಕೇಳಿದ್ದು.

ಶ್ರೀ ಬಿ. ರಾಚಯ್ಯ.—ಸ್ವಾಮಿ, ನಮಗೆ ಟೈಂ ಕೊಡಬೇಕೆಂದು ಕೇಳಿ ಕೊಂಡಿದ್ದೇವೆ. ಟೈಂ ಕೊಡಬೇಕಾಗುತ್ತದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಟೈಂ ಇವತ್ತಿನವರೆಗೆ ಆಯಿತು. ಇಂದು ನಿಮ್ಮ ಕಂತ್ರಿಗೆ ಹಿಡಿಯಂಬೇಕಾಗುತ್ತದೆ.

ಉಪಾಧ್ಯಕ್ಷರು.—ಬಾಯಿ ಬಿಡಿಸಬೇಕಾದರೆ, ಮೂಗು ಹಿಡಿಯಬೇಕು.

ಶ್ರೀ ಬಿ. ರಾಚಯ್ಯ.—ಉತ್ತರ ಕೊಡುತ್ತೇವೆಂದು ಭರವಸೆ ಕೊಟ್ಟ ಮೇಲೆ ಅದು ಸದನದ ಸ್ವತ್ತಾಯಿತು. ಇನ್ನು ಸ್ವಲ್ಪ ಟೈಂ ಕೊಡಬೇಕೆಂದು ಕೇಳಿ ಕೊಂಡಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಕ್ಷಮಿಸಬೇಕು. ಈ ವಾದವನ್ನು ಒಪ್ಪುವುದಕ್ಕಾಗುವುದಿಲ್ಲ. ಶ್ರೀ. ಲಕ್ಷ್ಮೀಸಾಗರ್‌ರವರು, ಶ್ರೀ ಜೆ. ಹೆಚ್. ಪಟೇಲರು ಹೇಳಿದ್ದನ್ನೇ ಇವರು ಪುನರುಚ್ಚಾರ ಮಾಡಿದಾರೆ.

ಉಪಾಧ್ಯಕ್ಷರಂ.—ಟೈಂ ಅಂದರೆ ೬ ತಿಂಗಳಾಗಬಹುದು. ೪ ತಿಂಗಳಾದರೂ ಆಗಬಹುದು. ೧೦ ತಿಂಗಳಾಗಬಹುದು.

ಶ್ರೀ ಭೀಮಣ್ಣ ಖಂಡ್ರೆ.—ಈಗಾಗಲೇ ಮೂರು ತಿಂಗಳಾಗಿದೆ, ಏತಕ್ಕೆ ಡಿಲೆ ಆಯಿತು ?

(ಗೊಂದಲ)

ಉಪಾಧ್ಯಕ್ಷರು.—ಖಚಿತವಾಗಿ ಹೇಳಲಿಲ್ಲ.

ಶ್ರೀ ಬಿ. ರಾಚಯ್ಯ.—ಸ್ವಾಮಿ, ಈಗಾಗಲೇ ಮೂರು ಗಂಟೆ ಚರ್ಚೆ ಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—೩೦ ಗಂಟೆ ಚರ್ಚೆ ಮಾಡಬೇಕಾಗುತ್ತದೆ.

ಶ್ರೀ ಭೀಮಣ್ಣ ಖಂಡ್ರೆ.—ಕಂಟೆಪ್ಟ್ ಆಫ್ ಹೌಸ್ ಆಗುತ್ತದೆ.

ಶ್ರೀ ಬಿ. ರಾಚಯ್ಯ.—ಸ್ವಾಮಿ, ನಾವು ಕಾಲಾವಕಾಶ ಕೇಳಿದ್ದೇವೆ.

ಶ್ರೀ ಎಸ್ ಬಂಗಾರಪ್ಪ.—ಈ ವಿಷಯದ ಮೇಲೆ ಮೂರು ಗಂಟೆ ಅಲ್ಲ ಮೂವತ್ತು ಗಂಟೆ ಕಾಲ ಚರ್ಚೆ ಮಾಡಬೇಕಾಗುತ್ತದೆ. ನಾನು ಒಂದು ಸಲಹೆ ಕೊಡುತ್ತೇನೆ. ಅವರು ಇದಕ್ಕೆ ಉತ್ತರ ಹೇಳಲು ಟೈಮ್ ಬೇಕೆಂದು ಕೇಳುತ್ತಿದ್ದಾರೆ. ಇದಕ್ಕೆ ನನ್ನ ಆಕ್ಷೇಪಣೆ ಇಲ್ಲ. ಆದರೆ ಒಂದು ಕಂಡೀಷನ್. ಈ ಸದನ ನಾಳೆ ನಾಡಿದ್ದು ನಡೆಯುವಂತೆ ಮಾಡಿ. ಈ ಸದನ ಕಂಟಿನ್ಯೂ ಆದರೆ, ಅದು ಮಂತ್ರಿಗಳ ತಪ್ಪಿನಿಂದ ಮುಂದುವರಿಯುತ್ತದೆ. ನೀವು ಹೇಳಿಕೆ ಕೊಡುವುದರಲ್ಲಿ ವಿಫಲರಾಗಿರುವುದರಿಂದ ಈ ಸದನ ಮುಂದುವರಿಯಬೇಕಾಗುತ್ತದೆ, ಇದಕ್ಕೆ ಆಗತಕ್ಕ ಖರ್ಚು ಏನಿದೆ ಅದನ್ನು ಕೊಡುವುದು ಸರಕಾರದ ಜವಾಬ್ದಾರಿಯಾಗುತ್ತದೆ. ತಾವು ಇದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೀರಾ ? ಈಗ ನಾವು ಕುಳಿತಿರುವುದೂ ಕೂಡಾ ನಿಮ್ಮಿಂದ, ಮೂರು ಗಂಟೆಗಳ ಕಾಲ ಚರ್ಚೆಯಾಗಿರುವುದೂ ಕೂಡಾ ನಿಮ್ಮಿಂದಲೇ.

ಶ್ರೀ ಬಿ ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಈ ಹಿಂದಿನ ನಿಯಮದ ವ್ಯಾಪ್ತಿ ಎಷ್ಟು ಎನ್ನುವುದನ್ನು ತಾವು ಯೋಚಿಸಬೇಕು. ಕೆಲವು ಸಂದರ್ಭಗಳಲ್ಲಿ ಇದಕ್ಕೆ ತಕ್ಷಣ ಉತ್ತರ ಹೇಳಿರುತ್ತೇವೆ. ಮುಂಚ್ಚುವರಿ ಮಾಡಬಾರದು ಎಂದು ನಮಗೆ ಗೊತ್ತಿರುವುದನ್ನು ಹೇಳುತ್ತೇವೆ. ಇನ್ನು ಕೆಲವು ವಿಷಯಗಳನ್ನು ಇಲಾಖೆಗೆ ಸಂಬಂಧಿಸಿದವರಿಂದ ತರಿಸಿ ಉತ್ತರ ಹೇಳಬೇಕಾಗುತ್ತದೆ. ತಪ್ಪು ಉತ್ತರ ಹೇಳಿದರೆ ಸರಿಯಲ್ಲ ಎನ್ನುವ ದೃಷ್ಟಿಯಿಂದ ನಮಗೆ ಕಾಲಾವಕಾಶ ಬೇಕೆಂದು ಕೇಳುತ್ತೇವೆ. ಅವರು ವಾಗ್ದಾನ ಮಾಡಿರುವ ಪ್ರಕಾರ ನಾನೂ ಸಹ ಕಾಲಾವಕಾಶ ಬೇಕೆಂದು ಕೇಳಿಕೊಂಡು, ಮುಂದಿನ ಸೆಷನ್ ಸೇರುವುದರೊಳಗೆ ಇದನ್ನು ಸಾಧ್ಯವಾದ ಮಟ್ಟಿಗೂ ತರಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಾವು ಅಧಿಕಾರದಲ್ಲಿದ್ದರೆ ನಾಲ್ಕು ವರ್ಷದಲ್ಲಿ ಈ ಉತ್ತರ ತರಿಸಿ ಕೊಡುತ್ತೇವೆ ಎಂಬ ಮಾತನ್ನು ತಾವು ಹೇಳಬಹುದು. ಅದು ಬೇಕಾಗಿಲ್ಲ.

ಉಪಾಧ್ಯಕ್ಷರು.—ಈ ವಿಷಯವನ್ನು ಇಲ್ಲಿಗೆ ಪೂರ್ಣ ಮಾಡೋಣ. ನಾನು ಮಾನ್ಯ ಮಂತ್ರಿಗಳನ್ನು ಕೇಳಿದ್ದೇನೆ. ಅವರು ಖಚಿತವಾಗಿ ಒಂದು ತಿಂಗಳೋ, ಎರಡು ತಿಂಗಳೋ ಅಥವಾ ೧೫ ದಿವಸದ ಒಳಗಡೆಯೋ ಉತ್ತರ ತರಿಸಿಕೊಡುತ್ತೇವೆ ಎಂಬ ಮಾತನ್ನು ಹೇಳಲಿ.

SRI BANGARAPPA —It is non of their business. ನಾವು ಈ ವಿಚಾರ ಜನವರಿ ತಿಂಗಳಲ್ಲಿ ಪ್ರಸ್ತಾಪ ಮಾಡಿದ್ದೇವೆ. ಆದಕ್ಕೆ ಮತ್ತೆ ಟೈಮ್ ಕೇಳಿದರೆ ಹೇಗೆ ? ಉತ್ತರ ಕೊಡುತ್ತೇವೆಂಬ ಆಶ್ವಾಸನೆಯನ್ನು ಅವರು ಕೊಟ್ಟಿದ್ದಾರೆ. ಮತ್ತೆ ಟೈಮ್ ಕೇಳಿಕೊಂಡು ಹೋಗುವುದಕ್ಕೆ ನಾವು ಇಲ್ಲಿ ಬಂದಿಲ್ಲ. ಸರಕಾರಕ್ಕೆ ತಾವು ಚಿಮಾರಿ ಹಾಕಬೇಕು. ಅವರು ತಪ್ಪು ಮಾಡಿದ್ದಾರೆ, ಏತಕ್ಕೆ ಅವರಿಗೆ ಶಿಕ್ಷೆ ಕೊಡಬಾರದು. ಅವರ ರಿಕ್ವೆಸ್ಟ್ ವಿಚಾರ ಆ ಮೇಲೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಉಪಾಧ್ಯಕ್ಷರು ಮೂರು ಸಲ ಕೇಳಿದರೂ ಅವರು ಕಾರಣ ಹೇಳುವುದಕ್ಕೆ ತಯಾರಾಗಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಚಿವರು, ಉತ್ತರ ತರಿಸಲು ಏತಕ್ಕೆ ತಡವಾಯಿತು ಎಂಬ ಬಗ್ಗೆ ಕಾರಣ ಕೊಡುತ್ತಿಲ್ಲ. ಅವರಿಗೆ ತಾವು ಚೀಮಾರಿ ಹಾಕುತ್ತಿಲ್ಲ. ಅವರು ಕ್ಷಮೆಯಂತೂ ಕೇಳುತ್ತಿಲ್ಲ. ೧೫ ದಿವಸ, ಒಂದು ತಿಂಗಳು ಟೈಮ್ ತೆಗೆದುಕೊಳ್ಳಲಿ. ಆದರೆ ಆಗಲೆ ಮೂರು ತಿಂಗಳಾಯಿತು. ಈ ಸದನವನ್ನು ಇವರು ಇಷ್ಟು ಹಗುರವಾಗಿ ತೆಗೆದುಕೊಳ್ಳಬೇಕಾಗಿಲ್ಲ. ಇಲ್ಲಿ ಮನಸ್ಸಿಗೆ ಬಂದಹಾಗೆ ಮಾಡುವುದಕ್ಕೆ ನಾವು ಕುಳಿತುಕೊಂಡಿಲ್ಲ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಹೊಸ ರೂಲ್ಸ್ ಪ್ರಕಾರ ನಿಯಮ ೩೩ಳಿರ ವ್ಯಾಪ್ತಿ ಏನು ? ಮಾನ್ಯ ಸದಸ್ಯರು ಇದರ ಮೇಲೆ ಹೇಳಿಕೆ ಕೊಡಲೇ ಬೇಕು ಎಂದು ಹೇಳುವುದಾದರೆ, ಈ ಸದನ ಈಗಿರುವ ರೂಲ್ಸ್ ಆಫ್ ಪ್ರೊಸೀಜರ್‌ಗೆ ತಿದ್ದುಪಡಿ ಮಾಡಲಿ.

ಉಪಾಧ್ಯಕ್ಷರು.—ಡಾ॥ ತಿಮ್ಮೇಗೌಡರೇ, ತಾವು ಇರಲಿಲ್ಲ. ಈಗ ಪ್ರಶ್ನೆ ಇರುವುದು ಇಷ್ಟೇ. ಯಾವ ಪ್ರಶ್ನೆಗೆ ಎರಡು ಮೂರು ದಿವಸ ಒಳಗೆ ಉತ್ತರ ತರಿಸಿಕೊಡುತ್ತೇವೆಂದು ಹೇಳಿದ್ದರೋ, ಅದನ್ನು ಇನ್ನೂ ತರಿಸಿಕೊಟ್ಟಿಲ್ಲ. ಏತಕ್ಕೋಸ್ಕರ ಇನ್ನೂ ತರಿಸಿಕೊಡುವುದಕ್ಕೆ ಆಗಿಲ್ಲ ಎಂದು ಕೇಳುತ್ತಿದ್ದಾರೆ. ಈ ವಿಷಯ ಬಹಳ ಸಿಂಪಲ್ ಆಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಉಪಾಧ್ಯಕ್ಷರೇ, ತಮ್ಮ ಕಷ್ಟ ನನಗೆ ಅರಿವಾಗಿದೆ. ತಾವು ರೂಲಿಂಗ್ ಕೊಡಬೇಕಾದರೆ ಬೇರೆ ಏನೂ ದಾರಿನೇ ಇಲ್ಲ. ತಾವು ಚೀಮಾರಿ ಹಾಕಲೇ ಬೇಕಾಗುತ್ತದೆ. ಇವತ್ತಿನ ದಿವಸ ಬಂಗಾರಪ್ಪನವರು ಬೇರೆ ಏನೂ ಕೇಳಲಿಲ್ಲ. ಈಗ ೩೩ಳಿನೇ ನಿಯಮದ ಬಗ್ಗೆಯೂ ಪ್ರಶ್ನೆ ಇಲ್ಲ. ಅದರ ಬಗ್ಗೆ ಇಲ್ಲಿ ಚರ್ಚೆ ಮಾಡುತ್ತಿಲ್ಲ. ಮಾನ್ಯ ಸಚಿವರು ಕೊಟ್ಟಂತಹ ಅಶ್ಯೂರೆನ್ಸ್ ಏತಕ್ಕೆ ಜಾರಿಯಾಗುವುದಿಲ್ಲ ? ಮೊದಲೇ ಏನೋ ತಪ್ಪಾಗಿಹೋಗಿದೆ ಎಂದರೆ ತೊಂದರೆಯೇ ಇರಲಿಲ್ಲ. ಈಗ ಮಾನ್ಯ ಬಂಗಾರಪ್ಪನವರು ಈ ಅಧಿವೇಶನವನ್ನು ಇನ್ನೂ ಮುಂದುವರಿಸಿ, ಅದಕ್ಕೆ ಆಗತಕ್ಕ ಖರ್ಚನ್ನು ಕೊಡಿ ಎಂದು ಹೇಳುತ್ತಿದ್ದಾರೆ. ನಮಗೆ ಇನ್ನೂ ಒಂದು ೫೦ ರೂಪಾಯಿಗಳನ್ನು ಜಾಸ್ತಿ ಕೊಡುತ್ತೇವೆ ಎಂದರೆ ಆಗಬಹುದು.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಉಪಾಧ್ಯಕ್ಷರೇ, ಈ ೩೩ಳಿನೇ ನಿಯಮದ ಈಗ ಇರತಕ್ಕ ಸರಳವಾದ, ನೇರವಾದ ಪ್ರಶ್ನೆ ಎಂದರೆ, ಉತ್ತರ ಕೊಡುತ್ತೇವೆಂದು ಹೇಳಿದ್ದಕ್ಕೆ, ಏತಕ್ಕೆ ಉತ್ತರ ಕೊಟ್ಟಿಲ್ಲ, ಅದಕ್ಕೆ ಉತ್ತರ ತರಿಸಿಕೊಡುವುದಕ್ಕೆ ಬೇಕಾದಷ್ಟು ಕಾಲ ಇತ್ತು ಎಂಬ ಮಾತನ್ನು ಹೇಳಿದ್ದಾರೆ. ಈಗ ಸಾಯಂಕಾಲ ೫ ಗಂಟೆಯ ಒಳಗೆ ಅಧಿವೇಶನ ಮುಂಗಿಯುವುದರೊಳಗೆ ಉತ್ತರ ತರಿಸಿಕೊಡುವುದಕ್ಕೆ ಆಗುವುದಿಲ್ಲ. ಇದಕ್ಕೆ ಇನ್ನೂ ಸಮಯ ಬೇಕು. ಇದನ್ನು ಬೇಕಾದರೆ ಅಶ್ಯೂರೆನ್ಸ್ ಕಮಿಟಿಗೆ ಕಳುಹಿಸಿ. ಸದನದಲ್ಲಿ ಯಾವುದೇ ಹೇಳಿಕೆ ಮಾಡುತ್ತೇವೆಂದು ಹೇಳಿ, ಅದನ್ನು ಮಾಡದೆ ಇದ್ದರೆ, ಅದನ್ನು ಅಶ್ಯೂರೆನ್ಸ್ ಕಮಿಟಿಗೆ ಹಾಕಬೇಕೆಂದು ೨೮೦ನೇ ನಿಯಮ ಹೇಳುತ್ತದೆ. ಇದನ್ನು ಅಶ್ಯೂರೆನ್ಸ್ ಕಮಿಟಿಗೆ ಕಳುಹಿಸುವುದು ಟೆಕ್ನಿಕಲ್ ಆಗಿ ಸರಿಯಲ್ಲ. ಆದರೂ ನಾನು ಹೇಳುತ್ತಿದೆ ಅಶ್ಯೂರೆನ್ಸ್ ಕಮಿಟಿಗೆ ಇದನ್ನು ಹಾಕಿ, ಅಲ್ಲಿ ಉತ್ತರ ಕೊಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಭಾರೀ ದೊಡ್ಡ ತ್ಯಾಗ ತಮ್ಮದು.

ಶ್ರೀ ಭೀಮಣ್ಣ ಖಂಡ್ರೆ.—ಅಧ್ಯಕ್ಷರೇ, ಚೀಮಾರಿ ಹಾಕುತ್ತೀರಿ ಎಂದು ಇದನ್ನು ಅಶ್ಯೂರೆನ್ಸ್ ಕಮಿಟಿಗೆ ಕಳುಹಿಸಿ ಎಂದು ಹೇಳುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಭಯದಿಂದ ಹೀಗೆ ಹೇಳುತ್ತಿದ್ದಾರೆ. ಮಾಡಿರತಕ್ಕಂಥ ತಪ್ಪಿಗೆ ಕ್ಷಮೆ ಕೇಳುವಂಥ ಸೌಜನ್ಯತೆ ಇವರಿಗೆ ಇಲ್ಲ, ಸೌಜನ್ಯತೆ ಇಲ್ಲದಿರತಕ್ಕವರಿಗೆ ಕೊಡಬೇಕಾದ ಶಿಕ್ಷೆ ಎಂದರೆ ಚೀಮಾರಿ ಹಾಕತಕ್ಕದ್ದೇ ಆಗಿದೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಉಪಾಧ್ಯಕ್ಷರೇ, ಸನ್ಮಾನ್ಯ ಸದಸ್ಯರ ಕೈಯಲ್ಲಿ ಹೊಗಸಿಕೊಳ್ಳುವುದಕ್ಕಿಂತ, ನಿಮ್ಮ ಹತ್ತಿರ ಚೀಮಾರಿ ಹಾಕಿಸಿಕೊಳ್ಳುವುದೇ ನಮಗೆ ಒಳ್ಳೆಯದೂ. ಇದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಈ ಪ್ರಶ್ನೆಯನ್ನು ಇಲ್ಲಿಗೇ ಬಿಡುವುದಕ್ಕೆ ಸಾಧ್ಯವಿಲ್ಲ. ಪುನಃ ತಮ್ಮ ಅಶ್ಯೂರೆನ್ಸ್ ಕೇಳುವುದಕ್ಕೆ ನಾವು ಇಲ್ಲಿ ಬಂದಿಲ್ಲ, ಇದು ನಮ್ಮ ಹಕ್ಕಿನ ವಿಚಾರ ಇದೆ. ಇತ್ಯರ್ಥ ಆಗಬೇಕು. ಹೇಳಿಕೆ ಕೊಡಲೇ ಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಇವರ ಕೈಯಲ್ಲಿ ಉತ್ತರ ಕೊಡುವುದಕ್ಕೆ ಆಗುವುದಿಲ್ಲ, ತಾವು ಚೇಪಾರಿ ಹಾಕಿ ಬಿಡಿ ಸಾಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಉಪಾಧ್ಯಕ್ಷರೇ, ಇನ್ನು ಒಂದೇ ದಾರಿ ತಮಗೆ ಉಳಿದಿರುವುದು. ಇದನ್ನು ಅಶ್ಯೂರೆನ್ಸ್ ಕಮಿಟಿಗೆ ಕಳುಹಿಸುವುದಕ್ಕೆ ಬರುವುದಿಲ್ಲ.

ಶ್ರೀ ಹೆಚ್. ಆರ್. ಲಕ್ಷ್ಮಯ್ಯ.—ಮಾನ್ಯ ಉಪಾಧ್ಯಕ್ಷರೇ, ಹಿಂದೇನೂ ಇದನ್ನು ಏಯವಾ ತಿಳಿಳರ ಪ್ರಕಾರ ತಂದಿದ್ದರು. ಈಗಲೂ ಸಹ ಇದನ್ನು ನಿಯಮ ತಿಳಿಳರ ಪ್ರಕಾರನೇ ತಂದಿದ್ದಾರೆ. ಒಟ್ಟು ಇದು ಟಿಟರ ಆಗಿದೆ. ಇದರಲ್ಲಿ ಯಾರ ಕಡೆಗೂ ರೂಲಿಂಗ್ ಕೊಡುವುದಕ್ಕೆ ಬರುವುದಿಲ್ಲ.

ಶ್ರೀ ಎಂ. ಎಸ್. ನಾರಾಯಣರಾವ್.—ಈ ವಿಚಾರದಲ್ಲಿ ಮಾನ್ಯ ಸಚಿವರು ಉತ್ತರ ಕೊಡುತ್ತೇವೆಂದು ಹೇಳಿರಬಹುದು. ತಾವು ಇದರ ಬಗ್ಗೆ, ೨೪೧ನೇ ನಿಯಮದ ಪ್ರಕಾರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈ ರೂಲ್ ಪ್ರಕಾರ ಗೌರ್ನಮೆಂಟ್‌ಗೆ ಚೇಮಾರಿ ಹಾಕಬೇಕಾದುದು ಇಲ್ಲ ಎಂದು ನಾನು ಅಂದುಕೊಂಡಿದ್ದೇನೆ. ೩೪೧ನೇ ನಿಯಮದ ಪ್ರಕಾರ ಕ್ರಮ ತೆಗೆದುಕೊಳ್ಳಬಹುದೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಉಪಾಧ್ಯಕ್ಷರೇ, ತಾವು ಆಯಿತು ಕ್ಲೋಸ್ ಮಾಡೋಣ ಎಂದು ಹೇಳುತ್ತಿದ್ದೀರಿ. ಇದರ ಬಗ್ಗೆ ತಾವು ಸರಕಾರಕ್ಕೆ ಹೇಳುವುದು ಬಹಳ ಒಳ್ಳೆಯದು.

ಉಪಾಧ್ಯಕ್ಷರು.—ನಾನು ಸರಕಾರಕ್ಕೂ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಇದರಲ್ಲಿ ಸರಕಾರದ ಜವಾಬ್ದಾರಿ ಪ್ರಶ್ನೆ ಇದೆ. ಇದನ್ನು ಐದು ನಿಮಿಷದಲ್ಲಿ ಬಗೆಹರಿಸುವುದಕ್ಕೆ ಸಾಧ್ಯ ಇತ್ತು. ಇದರ ಬಗ್ಗೆ ತಾವು ಏನು ತೀರ್ಮಾನ ಮಾಡುತ್ತೀರಿ ಮಾಡಿ.

(ಗಲಾಟೆ – ಗೊಂದಲ)

ಶ್ರೀ ಬಿ. ರಾಚಯ್ಯ.—ಜೀರೋ ಹವರ್‌ನ್ನು ತೆಗೆದು ಹಾಕಿರುವುದರಿಂದ ಅದರ ಬದಲು ನಿಯಮ ತಿಳಿಳನ್ನು ಹೊಸದಾಗಿ ನಾವು ನೀವು ಸೇರಿ ಒಪ್ಪಿಕೊಂಡು ಮಾಡಿದ್ದೇವೆ. ಇದರ ಬಗ್ಗೆ ರೆಗ್ಯುಲರ್ ಕ್ವಶ್ಚನ್ ತರಹ ಪ್ರಶ್ನೆ ಕೇಳಿದರೆ ಉತ್ತರವನ್ನು ಕೂಡಲೇ ತರಿಸಿ ಕೊಡುವುದಕ್ಕೆ ಕಷ್ಟವಾಗುತ್ತದೆ. ಹಾಗಾದರೆ ಸರ್ಕಾರವನ್ನೂ ಸಹ ನಡೆಸುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.— ಕಾಲಾವಕಾಶ ಕೊಡಬೇಕಾಗುತ್ತದೆ ಒಪ್ಪೋಣ. ಆದರೆ ಜನವರಿ, ಫೆಬ್ರುವರಿಯಲ್ಲಿ ಉತ್ತರ ತರಿಸಿ ಕೊಡುತ್ತೇವೆಂದು ಹೇಳಿದ್ದರೂ ಸಹ ಇಲ್ಲಿಯವರೆಗೆ ತರಿಸಿ ಕೊಡದಿದ್ದರೆ ನಾವು ಇಲ್ಲಿ ಉತ್ತರ ಬರುತ್ತದೆಂದು ಕಾಯಂತಾ ಕುಳಿತುಕೊಳ್ಳಬೇಕೇ ?

ಶ್ರೀ ಬಿ. ರಾಚಯ್ಯ.— ನೀವು ಅಧಿಕಾರವನ್ನು ನಡೆಸಿದವರು ನಾವು ಸಹ ನಡೆಸುತ್ತಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.— ನಿಮ್ಮ ಹಾಗೆ ಹೇಳಿಕೆಯಂನ್ನು ನಾವು ಕೊಡುತ್ತಿರಲಿಲ್ಲ. ಸರ್ಕಾರವನ್ನು ನಡೆಸುತ್ತಿರತಕ್ಕವರು ಜವಾಬ್ದಾರಿಯುತವಾದ ಹೇಳಿಕೆಯನ್ನೇ ಕೊಡಬೇಕಾಗುತ್ತದೆ.

ಶ್ರೀ ಬಿ. ರಾಚಯ್ಯ.— ಜವಾಬ್ದಾರಿಯುತವಾಗಿಯೇ ಹೇಳಿಕೆಯಂನ್ನು ಕೊಡುತ್ತಿದ್ದೇವೆ. ಉತ್ತರವನ್ನು ಕೊಡಬೇಕಾಗಿದ್ದರ ಕಾಲಾವಕಾಶ ಬೇಕಾಗುತ್ತದೆ. ಬರೀ ಕೂಗಾಡಿದರೆ ಏನೂ ಆಗುವುದಿಲ್ಲ ಸ್ವಾಮಿ. ನಿಮಗಿಂತ ಚೆನ್ನಾಗಿ ಸರ್ಕಾರವನ್ನು ನಡೆಸಿಕೊಂಡು ಬರುತ್ತಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.— ಬೆಣ್ಣೆಯಲ್ಲಿ ಕೂದಲನ್ನು ತೆಗೆದ ಹಾಗಲ್ಲ, ನಾವು ಕೂಡ ಕಾನೂನು ಪ್ರಕಾರವಾಗಿಯೇ ಕೇಳುತ್ತಿದ್ದೇವೆ. ನಿಮಗೂ ಶಕ್ತಿ ಇದ್ದರೆ ನೀವೂ ಕೂಗಿ ಇಲ್ಲಿ ಮೆತ್ತಗೆ ಮಾತನಾಡಿದರೆ ಏನೂ ಆಗುವುದಿಲ್ಲ. ಮಾನ್ಯ ರಾಚಯ್ಯನವರದು ಎಲ್ಲಾ ಗೊತ್ತಿದೆ ಕೂತು ಕೊಳ್ಳಿ...

(ಗಲಾಟೆ – ಗೊಂದಲ)

SRI B. RACHAIAH.— I know you. You cannot threaten me. I know your history. ಈ ರೀತಿ ಹೇಳುವುದನ್ನು ನಿಲ್ಲಿಸಬೇಕು.

MR. DEPUTY SPEAKER —Order please.

ಶ್ರೀ ಬಿ. ರಾಚಯ್ಯ.— ಅಧ್ಯಕ್ಷರೆ.....

ಶ್ರೀ ಎಸ್. ಬಂಗಾರಪ್ಪ.— ಎಲ್ಲಾ ಗೊತ್ತಿದೆ ಕುಳಿತುಕೊಳ್ಳಿ, ಸುಮ್ಮನೇ ಏತಕ್ಕೆ ಮಾತನಾಡುತ್ತೀರಿ ?

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ಹೇಗೆ ಮಾತನಾಡಬೇಕು ಎಂಬುದು ಎಲ್ಲಾ ನಮಗೆ ಗೊತ್ತಿದೆ, ನೀವು ಹೇಳಬೇಕಾಗಿಲ್ಲ.

ಉಪಾಧ್ಯಕ್ಷರು.— Order please. ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಉಪಾಧ್ಯಕ್ಷರು.— ಈಗ ಪ್ರಶ್ನೆ ಇರುವುದು ಇಷ್ಟೆ. ೩೩೪ ರ ನಿಯಮದ ಕೆಳಗೆ ಪ್ರತಿ ನಿತ್ಯ ಮುಖ್ಯವಾದ ವಿಷಯಗಳನ್ನು ಪ್ರಸ್ತಾಪ ಮಾಡಿ ಹೇಳಲು ಅವಕಾಶವಿರಲಿ ಎನ್ನುತಕ್ಕ ದೃಷ್ಟಿಯಿಂದ ಆ ಒಂದು ಅವಕಾಶವನ್ನು ಮಾಡಿಕೊಡಲಾಗಿದೆ.

SRI M. VEERAPPA MOILY.— It is not a mercy petition. If you are going to treat 334 as a mercy petition, we are going to stop sending matters under 334.

SRI S. BANGARAPPA.— We are going to stop this.

ಶ್ರೀ ಎಂ: ವೀರಪ್ಪ ಮೊಯ್ಲಿ.— ದಯಾ ದಾಕ್ಷಿಣ್ಯದಿಂದ ಬೇಕಾಗಿಲ್ಲ. ನಿಯಮ ೩೩೪ರ ಕೆಳಗೆ ಮಾನ್ಯ ಸದಸ್ಯರು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾತ್ರ ಕೊಡಿ, ಇಲ್ಲದಿದ್ದರೆ ಬಿಟ್ಟು ಬಿಡಿ,

ಶ್ರೀ ಜೆ. ಎಚ್. ಪಟೇಲ್.—ಕ್ಲೋಜ್ ಮಾಡಿಬಿಡಿ.

SRI M. VEERAPPA MOILY.—If you are going to give a ruling you give it. We will not come in the way.

(ಗಲಾಟೆ–ಗೊಂದಲ)

ಉಪಾಧ್ಯಕ್ಷರು.—ಅದಕ್ಕೋಸ್ಕರವಾಗಿ ನಾನು ಹೇಳುತ್ತಿದೆ. ನಿಯಮ ೩೩೪ರ ಕೆಳಗೆ ಇಲ್ಲಿ ವಿಷಯಗಳನ್ನು ಪ್ರಸ್ತಾಪ ಮಾಡಲು ಅವಕಾಶವನ್ನು ಕೊಡುವುದು ಬಿಡುವುದು ಅದು ಬೇರೆ ವಿಷಯ. ಆದರೆ ಇಲ್ಲಿ ಏನಾಗಿದೆ ಎಂದರೆ ಪ್ರತಿ ನಿತ್ಯ ೩೦–೪೦ ವಿಷಯಗಳು ಬರುತ್ತಿವೆ...

ಶ್ರೀ ವೀರಪ್ಪ ಮೊಯ್ಲಿ.—೨೦–೩೦ ಎಂದು ಹೇಳುತ್ತೀರಿ, ಇದರಿಂದ ನಮಗೆ ಏನಾಗುತ್ತಿದೆ ಎಂದರೆ ನಾವು ಏನೋ ತಪ್ಪು ಮಾಡಿದವರ ಹಾಗಾಗಿದೆ, ಬಹಳ ಸಣ್ಣ ಮನುಷ್ಯರಾದ ಹಾಗೆ ಕಾಣುತ್ತಿದ್ದೇವೆ. ಆ ಒಂದು ಪರಿಸ್ಥಿತಿಯಲ್ಲಿ ಸದಸ್ಯರನ್ನು ಇಡಬೇಡಿ. ನಮಗೆ ಹ್ಯಮಿಲೇಷನ್ ಆಗುತ್ತಿದೆ. ದಿನಕ್ಕೆ ೨೦–೩೦ ಇಂತಹ ವಿಷಯಗಳು ಬಂದರೆ ೪–೫ ವಿಷಯಗಳನ್ನಾದರೂ ಪ್ರಸ್ತಾಪ ಮಾಡಲು ಮಾನ್ಯ ಸದಸ್ಯರಿಗೆ ಅವಕಾಶ ಮಾಡಿಕೊಡಿ. ಅವರು ಗಾಂಭೀರವಾಗಿ ಎದ್ದು ನಿಂತುಕೊಂಡು ಮಾತನಾಡಲು ಅವಕಾಶವಾಗುತ್ತದೆ. ದಿವಸಕ್ಕೆ ೩೦–೪೦ ಬರುತ್ತಿದೆ ಜಾಸ್ತಿಯಾಯಿತು ಎನ್ನುವ ಹಾಗಿದ್ದರೆ ಬೇಕಾದರೆ ನಮ್ಮನ್ನು ನಿಮ್ಮ ಛೇಂಬರಿಗೆ ಕರೆಸಿ ಅಲ್ಲಿ ಚರ್ಚೆ ಮಾಡೋಣ.

ಶ್ರೀ ಬಿ. ರಾಚಯ್ಯ.—ಚರ್ಚೆ ಮಾಡೋಣ, ಚರ್ಚೆ ಮುಖಾಂತರವಾಗಿ ಈಗಿರತಕ್ಕ ತೊಂದರೆಯನ್ನು ಸರಿಪಡಿಸಿಕೊಳ್ಳಿವುದಕ್ಕೆ ವ್ಯವಸ್ಥೆ ಮಾಡಿಕೊಳ್ಳೋಣ. ಈಗಿನ ಸಂದರ್ಭದಲ್ಲಿ ನಮಗೆ ಕೂಡಲೆ ಉತ್ತರವನ್ನು ಒದಗಿಸಿಕೊಡಲು ಟೈಮ್ ಬೇಕಾಗುತ್ತದೆ...

ಎಸ್. ಬಂಗಾರಪ್ಪ —ಟೈಮ್ ಕೇಳಿದರೆ ಕೊಡೋಣ ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಇವತ್ತೇ ನಾವು ಯಾವುದಾದರೂ ಒಂದು ವಿಚಾರವನ್ನು ಕೇಳಿದರೆ ಅದಕ್ಕೆ ಟೈಮ್ ಕೊಡಬೇಕಾಗುತ್ತದೆ, ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ ಜನವರಿ, ಫೆಬ್ರುವರಿ, ಮಾರ್ಚ್ ತಿಂಗಳಲ್ಲಿ ಕೇಳಿರುವ ಪ್ರಶ್ನೆಗಳನ್ನು ಪುನಃ ರಿಪೀಟ್ ಮಾಡುವ ಬಗ್ಗೆ ಮಾನ್ಯ ಮಂತ್ರಿಗಳವರು ಹೇಳಿದರು ಅದು ಸರಿಯಲ್ಲ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಮಾನ್ಯ ಮಂತ್ರಿಗಳವರು ವಿಷಯವನ್ನು ಅರ್ಥ ಮಾಡಿಕೊಂಡಿಲ್ಲವೆಂದು ಕಾಣುತ್ತದೆ. ನಾವು ೨–೩ ತಿಂಗಳ ಹಿಂದೆ ಎತ್ತಿದಂಥ ಪ್ರಶ್ನೆಗಳಿಗೆ ಇಲ್ಲಿ ಮಾನ್ಯ ಮಂತ್ರಿಗಳವರು ಉತ್ತರ ಒದಗಿಸಿ ಕೊಡುವುದಾಗಿ ವಾಗ್ದಾನ ಇತ್ತಿದ್ದರು. ಅದಕ್ಕೆ ನಾವು ಇವತ್ತಿನ ದಿವಸ ಅವರಿಂದ ಉತ್ತರವನ್ನು ನಿರೀಕ್ಷಣೆ ಮಾಡುತ್ತಿದ್ದೇವೆ.

ಉಪಾಧ್ಯಕ್ಷರು.—ಪ್ರಶ್ನೆ ಇಷ್ಟೆ ಇರುವುದು ಅರ್ಥ ಮಾಡಿಕೊಳ್ಳಿ ೨–೩ ತಿಂಗಳ ಹಿಂದೆ ಕೇಳಿದಂಥ ಪ್ರಶ್ನೆಗಳಿಗೆ ಉತ್ತರವನ್ನು ಇಲ್ಲಿಯವರೆಗೆ ಏತಕ್ಕೆ ಕೊಡಲಿಕ್ಕೆ ಆಗಿಲ್ಲ, ಯಾವಾಗ ಕೊಡುತ್ತೀರಿ ಎನ್ನತಕ್ಕ ಮಾತನ್ನ ಹೇಳುತ್ತಿದ್ದಾರೆ. ನೀವು ಅದಷ್ಟು ಜಾಗ್ರತೆ ಎನ್ನತಕ್ಕ ಪದವನ್ನು ಉಪಯೋಗಿಸುವುದು ಸ್ವಲ್ಪ ಕಡಿಮೆ ಮಾಡಿ. ಅದಷ್ಟು ಜಾಗ್ರತೆ ಮಾಡುತ್ತೇವೆ ಎಂದರೆ ೧೫ ದಿವಸವೇ ೧ ತಿಂಗಳೇ ಎಂದು ಸದಸ್ಯರು ಕೇಳತಕ್ಕದ್ದನ್ನು ಅರ್ಥ ಮಾಡಿಕೊಳ್ಳಿ...

ಶ್ರೀ ಎಂ. ವೀರಪ್ಪ ಮೊಯ್ಲಿ.—ಒಂದು ಪ್ರಶ್ನೆಗೆ ಆ ರೀತಿಯಾದ ಉತ್ತರ ಕೊಡತಕ್ಕದ್ದು ಒಂದು ಜಾಡ್ಯ, ಹಿಂದೆ ಸಹ ಮಂತ್ರಿಗಳು ಇದೇ ರೀತಿಯಾದ ಉತ್ತರವನ್ನು ಕೊಡುತ್ತಿದ್ದರು ಇಲ್ಲವೆಂದು ಹೇಳುವುದಿಲ್ಲ. ಆದುದರಿಂದ ತಾವು ಈ ರೀತಿಯಾಗಿ ಅವರಿಗೆ ಹೇಳಿದರೆ ನ್ಯಾಯ ಮಾಡಿದ ಹಾಗಾಗುವುದಿಲ್ಲ. ಕೆಲವು ಸಂದರ್ಭದಲ್ಲಿ ಅಡ್ವಿನಿಸ್ಟ್ರೇಟಿವ್ ಮ್ಯಾಟರ್ಸ್ ಇರುತ್ತದೆ ಅದರ ಬಗ್ಗೆ ಹೇಳಿದರೆ ನಾವು ಒಪ್ಪಿಕೊಳ್ಳಬಹುದು. ಆದರೆ ಎಲ್ಲಾ ವಿಷಯಕ್ಕೂ ಸಹ ಉತ್ತರ ಕೊಡುತ್ತೇವೆ, ಹೇಳಿಕೆ ಕೊಡುತ್ತೇವೆಂದು ಹೇಳಿದರೆ ಆಗಲೇ ಸಿಕ್ಕಿಹಾಕಿಕೊಳ್ಳುತ್ತಾರೆ. ಯಾವ ಯಾವ ವಿಷಯಕ್ಕೆ ಇವರು ಇಲ್ಲಿ ಹೇಳಿಕೆ ಕೊಡುತ್ತೇವೆಂದು ಹೇಳಿರುತ್ತಾರೋ ಅದೆಲ್ಲವನ್ನೂ ಸಹ ಡೈರಿಯಲ್ಲಿ ಆಯಾಯಾ ದಿನದಲ್ಲಿಯೇ ಬರೆದುಕೊಂಡು ಅದಕ್ಕೆ ಸರಿಯಾದ ಉತ್ತರವನ್ನು ತರಿಸಿಕೊಡಲು ಪಯತ್ನ ಮಾಡಬೇಕು. ಆದರೆ ಇಲ್ಲಿ ಇಷ್ಟು ಗಲಾಟೆಯಾಗುವುದಕ್ಕೆ ಕಾರಣವೇನೆಂದರೆ ಉತ್ತರ ಕೊಡುತ್ತೇವೆ, ಪರಿಶೀಲನೆ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟುಬಿಟ್ಟಿದ್ದಾರೆ. ಅದರ ಪರಿಣಾಮವಾಗಿ ಇಷ್ಟು ಗಲಾಟೆಯಾಗುವುದಕ್ಕೆ ಕಾರಣ ವಾಗಿದೆ. ಅಡ್ವಿನಿಸ್ಟ್ರೇಟಿವ್ ಮ್ಯಾಟರ್ ಆಗಿದ್ದರೆ ಡ್ರಾಪ್ ಮಾಡೋಣ ಅದನ್ನು ಪರಿಶೀಲನೆ ಮಾಡುತ್ತಾರೆಂದು ಹೇಳಬಹುದು.

ಶ್ರೀ ಬಿ. ರಾಚಯ್ಯ.—ಇದರ ಬಗ್ಗೆ ನಾವು ಚರ್ಚೆ ಮಾಡಿ ಆಗಿರುವಂಥ ತೊಂದರೆಯನ್ನು ನಿವಾರಣೆ ಮಾಡಿಕೊಳ್ಳೋಣ. ಇಂಥ ಕೆಲವು ವಿಷಯಗಳನ್ನು ಮಾನ್ಯ ಸದಸ್ಯರು ಸಭೆಯಲ್ಲಿ ಪ್ರಸ್ತಾಪ ಮಾಡಿದ ತಕ್ಷಣ ನಮಗೆ ಉತ್ತರವನ್ನು ಒದಗಿಸಿ ಎಂದು ಹೇಳಿದರೆ ಕಷ್ಟವಾಗುತ್ತದೆ. ನಾವೂ ಸಹ ಸಂಬಂಧಪಟ್ಟ ಇಲಾಖೆಗಳಿಂದ ಉತ್ತರವನ್ನು ತರಿಸಿ ತಮಗೆ ಸರಿಯಾದ ಉತ್ತರವನ್ನು ಕೊಡಬೇಕಾಗುತ್ತದೆ. ಉತ್ತರವನ್ನು ಒದಗಿಸಿಕೊಡಲು ನಮಗೆ ಸಮಯ ಬೇಕಾಗುತ್ತದೆಂದು ಹೇಳುವುದು ತಮ್ಮ ಕಾಲದಲ್ಲಿಯೂ ಇತ್ತು.

SRI.M. VEERAPPA MOILY.—I think it is necessary that I must dwell on. ನಾನು ಈ ರೀತಿ ಹೇಳುತ್ತೇನೆಂದು ತಾವು ತಪ್ಪು ತಿಳಿದುಕೊಳ್ಳಬೇಡಿ. ಮಾನ್ಯ ಮಂತ್ರಿಗಳು ಸದನದಲ್ಲಿ ಕೊಟ್ಟ ಭರವಸೆಗಳಿಗೆ ಸ್ವಲ್ಪವಾದರೂ ಅರ್ಥ ಇರಬೇಕು. ಮಾನ್ಯ ಸದಸ್ಯರು ಎತ್ತಿದ ಕ್ಷಿಪ್ತವಾದ ಪ್ರಶ್ನೆಗಳಿಗೆ ಮಾನ್ಯ ಮಂತ್ರಿಗಳು ಏನೋ ಒಂದು ಭರವಸೆಯನ್ನು ಕೊಟ್ಟರೆ ಆ ವಿಷಯಕ್ಕೆ ಪರಿಹಾರ ದೊರಕಿದಂತಾಗುತ್ತದೆಯೇ ? ತಾವುಗಳು ಕೊಟ್ಟ ಭರವಸೆಗಳು ಭರವಸೆಗಳ ಸಮಿತಿಗೆ ಹೋಗಬಹುದು, ಆದರೆ ತಕ್ಷಣದಲ್ಲಿಯೇ ಸಮಸ್ಯೆಗೆ ಪರಿಹಾರ ದೊರಕಿದಂತಾಗುತ್ತದೆಯೇ ? ಈ ರೀತಿಯಾಗಿ ತಾವೂ ಸಹ ಹೇಳುತ್ತಾ ಹೋದರೆ ನಮಗೆ ತೊಂದರೆಯಾಗತ್ತದೆ. ನೀವು ಭರವಸೆ ಕೊಟ್ಟಿದ್ದನ್ನು ಗಮನಿಸಿಕೊಂಡು ಹೋಗಬಹುದು ಆದರೆ I am sorry, this is my experience some of the Hon Ministers may be doing it. But I have observed that many of the Ministers are not doing it.

ಶ್ರೀ ಎಸ್. ಬಂಗಾರಪ್ಪ.—ಈಗ ಸಭೆಯಲ್ಲಿ ಸಂಸದೀಯ ವ್ಯವಹಾರ ಸಚಿವರೂ ಇದ್ದಾರೆ ಒಂದುಸಾರಿ ಮಾನ್ಯ ಮಂತ್ರಿಗಳು ಮಾನ್ಯ ಸದಸ್ಯರ ಪ್ರಶ್ನೆಗೆ ಭರವಸೆಯನ್ನು ಕೊಟ್ಟರೆ ಅದು ಜಾಯಿಂಟ್ ರೆಸ್ಪಾನ್ಸಿಬಲಿಟಿ ಆಗುವುದಿಲ್ಲವೇ ? ನಾವು ಹೇಳುವಂಥ ವಿಚಾರದಲ್ಲಿ ಹೆಚ್ಚಿನ ಅರ್ಥವಿದೆ. ತಾವು ಈ ವಿಷಯವನ್ನು ಹಗುರವಾಗಿ ತೆಗೆದುಕೊಳ್ಳದೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕ ಸೂಕ್ತ ರೀತಿಯ ಉತ್ತರಗಳನ್ನು ಒದಗಿಸುವುದಲ್ಲದೆ, ಕೊಟ್ಟಂಥ ಭರವಸೆಗಳು ಭರವಸೆಗಳಾಗಿಯೇ ಉಳಿಯದೇ,

ಸೂಕ್ತ ರೀತಿಯಲ್ಲಿ ಪರಿಹಾರ ನೀಡತಕ್ಕ ರೀತಿಯಲ್ಲಿ ತಾವು ಕಾರ್ಯಕ್ರಮವನ್ನು ಕೈಗೊಳ್ಳಬೇಕು ಎಂದೂ ನಾವು ತಮ್ಮಲ್ಲಿ ವಿಶೇಷವಾಗಿ ಕೇಳಿಕೊಳ್ಳುತ್ತೇನೆ. ನಾವು ಕೆಲವೊಂದು ಸಾರಿ ಹೋಂ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟ ವಿಷಯಗಳನ್ನು ಪ್ರಸ್ತಾಪಮಾಡಬಹುದು; ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧ ಪಟ್ಟ ವಿಷಯಗಳನ್ನೂ ಪ್ರಸ್ತಾಪ ಮಾಡಬಹುದು. ಆದರೆ ಈ ಎಲ್ಲಾ ವಿಚಾರಗಳಿಗೂ ಸಹ ತಾವು ಪರಿಶೀಲನೆ ಮಾಡುತ್ತೇವೆ, ನೋಡುತ್ತೇವೆಂದು ಹೇಳಿಕೊಂಡು ಹೋದರೆ ಸದಸ್ಯರು ಕೆಲಸ ಮಾಡುವುದು ಕಷ್ಟವಾಗುತ್ತದೆ. ಆದ್ದರಿಂದ ತಾವುಗಳು ಈ ವಿಚಾರಗಳ ಬಗ್ಗೆ ಸೂಕ್ತ ರೀತಿಯಲ್ಲಿ ಪರಿಶೀಲನೆ ಮಾಡಿ ಯಾವುದಾದರೂ ಒಂದು ನಿರ್ಧಾರಕ್ಕೆ ಬಂದರೆ ಇಂಥ ಸನ್ನಿವೇಶಗಳನ್ನು ತಾವು ನಿವಾರಣೆ ಮಾಡಬಹುದು ಎಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಸೂಚಿಸಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಈ ವಿಚಾರಗಳನ್ನು ದಯಾ ದಾಕ್ಷಿಣ್ಯಕ್ಕಾಗಿ ಉತ್ತರ ಕೊಡಬೇಕು ಎಂದು ಭಾವಿಸಿಕೊಂಡು ಉತ್ತರ ಕೊಡುವುದಾದರೆ ನಾವು ಇನ್ನು ಮುಂದೆ ೩೩ಳಿರ ಕೆಳಗೆ ವಿಷಯಗಳನ್ನು ಕಳುಹಿಸಿಕೊಡುವುದನ್ನೇ ಬಿಡಬೇಕಾಗುತ್ತದೆ. ನಾವು ಈ ರೀತಿಯಾಗಿ ಪ್ರತಿ ದಿವಸವೂ ಹೆಚ್ಚಿನ ಅವಕಾಶವನ್ನು ನಮಗೆ ಕೊಡಿ ಎಂದು ಕೇಳುವುದು ತಮಗೂ ಒಂದು ರೀತಿಯಲ್ಲಿ ನಾವು ಸಭಾ ನಿಯಮಾವಳಿಗಳನ್ನು ತಳ್ಳಿಹಾಕುತ್ತಿದ್ದೇವೆಂದು ಅಭಿಪ್ರಾಯ ಬರಬಹುದು. ಏಕೆಂದರೆ ತಾವು ನಮ್ಮನ್ನು ವಿಷಯಗಳನ್ನು ಪ್ರಸ್ತಾಪ ಮಾಡದ ರೀತಿಯಲ್ಲಿ ಮೊಟಕು ಮಾಡುವುದು ಸಮಂಜಸದ ಅಭಾವದ ಕಾರಣದಿಂದ ಎನ್ನುವುದನ್ನು ನಾನೂ ತಿಳಿಯುತ್ತೇನೆ, ಆದರೆ ಸದಸ್ಯರ ಅತಿ ಜರೂರಾದ ವಿಷಯಂಗಳಿಗೆ ಪರಿಹಾರ ಪಡೆಯಲು ಇರುವಂಥ ಮಾರ್ಗಗಳನ್ನು ನಾವು ಬಿಡುವುದು ಸರಿಯಲ್ಲ. ಬೇಕಾದರೆ ಈ ೩೩ಳಿನ್ನೇ ಬಿಟ್ಟುಬಿಡೋಣ.

ಉಪಾಧ್ಯಕ್ಷರು.—ಈ ವಿಚಾರವನ್ನು ಇಲ್ಲಿಗೆ ಮುಂಗಿಸೋಣ, ಶ್ರೀ ಎನ್. ಚಿಕ್ಕೇಗೌಡರು ತಮ್ಮ ಗಮನ ಸೆಳೆಯುವ ಸೂಚನೆಯನ್ನು ಕೇಳಬಹುದು.

ಹೊಸಕೋಟೆ ತಾಲ್ಲೂಕಿನಲ್ಲಿ ಲೋಡ್‌ಷೆಡ್ಡಿಂಗ್‌ನಿಂದಾಗಿ ರೈತರಿಗೆ ತೊಂದರೆ ಉಂಟಾದ ಬಗ್ಗೆ.

ಶ್ರೀ ಎಚ್. ಚಿಕ್ಕೇಗೌಡ.—ಹೊಸಕೋಟೆ ತಾಲ್ಲೂಕಿನಲ್ಲಿ ಎಲೆಕ್ಟ್ರಿಸಿಟಿ ಬೋರ್ಡ್‌ನವರ ಲೋಡ್ ಷೆಡ್ಡಿಂಗ್‌ನಿಂದಾಗಿ ರೈತರಿಗೆ ಉಂಟಾದ ತೊಂದರೆಯ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜೆ. ಎಚ್. ಪಟೇಲ್ (ವಿದ್ಯುಚ್ಛಕ್ತಿ ಮಂತ್ರಿಗಳು).—

The available energy is being used in the most judicious manner to ensure the water available in Linganamakki and Thattihalla lasts right upto 21st June 1984. As on today, the energy available at Linganamakki Dam is equivalent to 1329 MU and is equivalent to 18.72 MU per day for the balance of 71 days.

The water available at Bommanahalli Thattihalla is equivalent to 83 MU and we can produce energy at about 1 MU per day, till onset of monsoon.

We are continuously getting assistance from Maharastra and some time in the morning also. The total energy supplied by Maharastra during the month of March 1984 is 52 MU. However, from 1st April till today, the energy assistance from this source is only 3 MU because of some internal trouble in the MSEB system.

On the other hand, we are not getting any assistance from APSEB or from Ramagundam Super Thermal Station. The Hydarabad-